## 3

# ಮೂರು ಸೈನ್ಯಗಳನ್ನು ರಕ್ಷಿಸಿದ ಮನುಷ್ಯನು

## (2 ಅರಸು 3:1-27)

ನಮ್ಮ ಹಿಂದಿನ ಪಾಠವು "ಶ್ರೇಷ್ಟ ಸಂಗತಿಗಳನ್ನು ಮಾಡಿದ ಮನುಷ್ಯ" ಎಂದಿತ್ತು. ಕೆಲವರು ಈ ಅಧ್ಯಯನದಲ್ಲಿ ಎರಡು ಅದ್ಭುತಗಳನ್ನು ವಿಂಗಡಿಸಬಹುದು - ಕೆಟ್ಟ ನೀರನ್ನು ಶುದ್ಧಮಾಡುವದು ಮತ್ತು ಅಪಹಾಸ್ಯಮಾಡಿದ ಜನರ ಗುಂಪನ್ನು ಶಪಿಸಿದ್ದು ಇವು "ಚಿಕ್ಕವುಗಳಾಗಿವೆ." ಈ ಪಾಠದಲ್ಲಿ ನಾವು ನೋಡುವಂತೆ, "ದೊಡ್ಡ" ಅದ್ಭುತಗಳು ಮತ್ತು "ಚಿಕ್ಕ" ಅದ್ಭುತಗಳು ಎಲ್ಲವೂ ಒಂದೇ ದೇವರಿಂದ ಮಾಡಲ್ಪಟ್ಟಿವೆ. ಹೇಗೋ, ಈ ರೀತಿ ವಿಂಗಡಿಸುವುದಕ್ಕೆ ಹೆಚ್ಚು ಒತ್ತುಕೊಡುವವರು ಈ ಪಾಠದಲ್ಲಿ ಎಲೀಷನು ಯಾವ "ಪ್ರಮುಖ ವಾದದ್ದನ್ನು" ಮಾಡಿದನು: ಎಂದರೆ ಅದು ಇಸ್ರಾಯೇಲಿನ ಅರಸನಾದ - ಯೋರಾಮನನ್ನೂ ಒಳಗೊಂಡು ದೇವರು ಮೂವರು ಅರಸರನ್ನು ಮತ್ತು ಅವರ ಸೈನಿಕರನ್ನೂ ರಕ್ಷಿಸಲು ಪ್ರವಾದಿಯನ್ನು ಉಪಯೋಗಿಸಿದನು ಎಂಬುದೇ.

ಎಲೀಯನೊಡನೆ ಎಲೀಷನ ತರಬೇತಿಯು ಆಹಾಬನ ಆಳ್ವಿಕೆಯ ಆರಂಭದಲ್ಲಿ ಪ್ರಾರಂಭವಾಯಿತು ಮತ್ತು ಆಹಾಬನ ಮಗನಾದ ಅಹಜ್ಯನ ಸಂಕ್ಷಿಪ್ತ ಆಳ್ವಿಕೆಯವರೆಗೂ ಮುಂದುವರೆಯಿತು. ಎಲೀಷನ ಸ್ವಂತದ ಸೇವೆಯು ಆಹಾಬನ ಇನ್ನೊಬ್ಬ ಮಗನಾದ ಯೆಹೋರಾಮನ ಆಳ್ವಿಕೆಯ ಕೆಲ ಸಮಯದ ಮೊದಲಲ್ಲಿ ಪ್ರಾರಂಭವಾಯಿತು. ಪ್ರವಾದಿಯ ಕೆಲಸವು ಯೇಹುವಿನ ಯೆಹೋವಾಜನ, ಮತ್ತು ಯೋವಾಷನ (ಅಥವಾ ಜೋವಾಷ) ಆಳ್ವಿಕೆಯ ಅರಂಭದಲ್ಲಿ ಪ್ರಾರಂಭವಾಯಿತು. ಇಲ್ಲಿ ಸೂಚಿಸಿದಂತೆ, ಈ ಪಾಠದಲ್ಲಿ ಒಳಗೊಂಡಂತಹ ಘಟನೆಯು ಯೆಹೋರಾಮನ ಆಳ್ವಿಕೆಯ ಆರಂಭದಲ್ಲಿ ಪ್ರಾರಂಭವಾಯಿತು. ಇಲ್ಲಿ ಸೂಚಿಸಿದಂತೆ, ಈ ಪಾಠದಲ್ಲಿ ಒಳಗೊಂಡಂತಹ ಘಟನೆಯು ಯೆಹೋರಾಮನ ಆಳ್ವಿಕೆಯ ಆರಂಭದಲ್ಲಿ ಪ್ರಾರಂಭವಾಯಿತು.

ಬಹಶಃ ಎಲೀಷನ ಜೀವಿತದ ಘಟನೆಗಳು ಯಾವಾಗಲೂ ಕಾಲಾಕ್ರಮದಲ್ಲಿ ಹೊಂದಿಸಲ್ಪಟ್ಟಿರುತ್ತವೆ ಎಂಬುದು ಗಮನಿಸಲ್ಪಡುವಂಥದ್ದು ಆಗಿದೆ. ಉದಾಹರಣೆಗೆ, 2 ಅರಸು 5ರಲ್ಲಿ, ಗೇಹೆಜಿಯು ಕುಷ್ಟರೋಗಿಯಾದನು (ವಚನ 27), ಆದರೆ ಅಧ್ಯಾಯ 8ರಲ್ಲಿ, ಅರಸನ ಸನ್ನಿಧಿಯಲ್ಲಿ ಇದ್ದನು (ವಚನ 4) - ಆತನು ಈಗಾಗಲೇ ಕುಷ್ಟರೋಗಿಯಾಗಿದ್ದಲ್ಲಿ ಇದು ಬಹುವಾಗಿ ಅಸಂಭವನೀಯವಾದದ್ದು ಆಗಿದೆ. ತಿರುಗಿ, ಅರಸನಾದ ಯೋವಾಷನ ಮರಣದ ಪ್ರಕಟಣೆಯು (13:13) ಎಲೀಷನು ಯೋವಾಷನನ್ನು ಬೇಟಿ ಇತ್ತಾಗ ಆ ಕಥೆಯು ನಂತರದಲ್ಲಿ ಬರುವುದಾಗಿದೆ (ವಚನಗಳು 14-19). ನಂತರ, ಎಲೀಷನ ಜೀವಿತದಲ್ಲಿ ನಮ್ಮ ಪ್ರಸ್ತುತ ಕಥೆಯು ಎಲ್ಲಿ ಹೊಂದುವದೋ ಎಂಬುದು ನಮಗೆ ನಿಶ್ಚಿತವಲ್ಲ. 2 ಪೂರ್ವಕಾಲ ವೃತ್ತಾಂತ 21:12-15ರ ಪ್ರಕಾರ, ಎಲೀಯನಿಂದ ಒಂದು ಪತ್ರವು ಯೆಹೋಷಾಫಾಟನ ಮಗನಿಗೆ ಯೆಹೋಷಾಫಾಟನ ಮರಣಾನಂತರ ಬಂದಿತು ಆದರೆ ಯೆಹೋಷಾಫಾಟನು 2 ಅರಸು 3ರ ಕಥೆಯ ಒಂದು ಭಾಗವಾಗಿದ್ದಾನೆ (ವಚನ 7). 2 ಅರಸು 3ರ ಅಭಿಯಾನವು ನಡೆದಾಗ ಎಲೀಯನು ಇನ್ನೂ ಜೀವದಿಂದ ಇದ್ದನು ಮತ್ತು ಎಲೀಷನು ತನ್ನ ಪ್ರತಿನಿಧಿಸುವ ಸೇನೆಯೊಡನೆ ಉಪಸ್ಥಿತನಿದ್ದನು ಎಂಬುದನ್ನು ಇದು ಸೂಚಿಸುವಂತಹದ್ದಾಗಿದೆ.

ಕಾಲಾನುಕ್ರಮವು ಅಷ್ಟೊಂದು ಮಹತ್ವದ್ದಲ್ಲ. ಸತ್ಯವೇದಿಯ ವ್ಯವಸ್ಥೆಯು ಯಾವಾಗಲೂ ಕಾಲಾಕ್ರಮವಾಗಿರುವುದಿಲ್ಲ, ಆದರೆ ಎಂದಿಗೂ ಅಕ್ರಮವಾಗಿಯೂ ಇರುವುದಿಲ್ಲ. ಎಲೀಷನು

ತನ್ನ ಸಮಯದಲ್ಲಿ ಸಂಸ್ಥಾಪಿಸಲ್ಪಟ್ಟ ಅಧಿಕಾರಿಗಳೊಂದಿಗೆ ಹೇಗೆ ಕೆಲಸ ಮಾಡುತ್ತಿದ್ದನು ಮತ್ತು ದೇವರು ತನ್ನ ಜನರನ್ನು ರಕ್ಷಿಸಲು ಹೇಗೆ ಆತನನ್ನು ಉಪಯೋಗಿಸಿದನು ಎಂಬ ಸಂಗತಿಯ ವ್ಯಾಖ್ಯಾನದ ದೃಷ್ಟಾಂತಗಳನ್ನು ಈ ಕಥೆಯು ಒಳಗೊಂಡಿದೆ.

## ಅಸಹನೀಯ ಪರಿಸ್ಥಿತಿ (3:1-10)

2 ಅರಸು 1 ಕ್ಕೆ ಹಿಂದೆ ಬಂದಾಗ, ಅಲ್ಲಿ "ಅಹಜ್ಯನು ಮರಣಿಸಿದನು" (ವಚನ 17ಎ) ಎಂದು ದಾಖಲಾಗಿದೆ. ಅಹಜ್ಯನು ತನ್ನ ತಂದೆಯಾದ ಆಹಾಬನ ಮರಣಾ ನಂತರ ಇಸ್ರಾಯೇಲ್ಯರ ಉತ್ತರದ ರಾಜ್ಯದ ಅರಸನಾಗಿದ್ದನು. ಆದರೆ ಆತನು ಕೇವಲ ಎರಡು ವರ್ಷಗಳವರೆಗೆ ಅಂದರೆ ಸುಮಾರು ಕ್ರಿ.ಪೂ. 853-52ರವರೆಗೆ ಆಳಿದನು (ನೋಡಿರಿ 1 ಅರಸು 22:40, 51). ಅಹಜ್ಯನು ಮರಣಿಸಿದಾಗ, ಅವನಿಗೆ ಮಗನಿಲ್ಲದ್ದರಿಂದ ಅವನಿಗೆ ಬದಲಾಗಿ ಯೋರಾಮನೆಂಬವನು (ಆಹಾಬನ ಇನ್ನೊಬ್ಬ ದೊಡ್ಡಮಗ) ಅರಸನಾದನು (2 ಅರಸು 1:17ಬಿ). ಇದು "ಯೋರಾಮನೆಂಬವನು ಯೆಹೂದ್ಯರ ಅರಸನಾದ ಯೆಹೋಷಫಾಟನ ಮಗ ಯೆಹೋರಾಮನ ಆಳ್ವಿಕೆಯ ಎರಡನೆಯ ವರುಷದಲ್ಲಿ ಅರಸನಾದಾಗ" (ವಚನ 17ಸಿ) ಇದು ಸಂಭವಿಸಿತು.

ಒಂದು ನಿಮಿಷ ತಡೆಯಿರಿ! *ಯೆಹೋರಾಮನು* ತನ್ನ ಆಳ್ವಿಕೆಯನ್ನು *ಯೆಹೋರಾಮನ* ಎರಡನೆಯ ವರುಷದಲ್ಲಿ ಆಳ್ವಿಕೆಯಲ್ಲಿ ಆರಂಭಿಸಿದನೇ? ಎಲೀಷನ ಸೇವೆಯ ವಿಭಾಗಿಸಲ್ಪಟ್ಟ ರಾಜ್ಯಗಳ ಸಮಯದ ಆರಂಭದಲ್ಲಿ ಅಂದರೆ ಇಸ್ರಾಯೇಲಿನ ಉತ್ತರ ರಾಜ್ಯದಲ್ಲಿನ ಅರಸರು ಅಲ್ಲಿದ್ದರು (ಅದು ಎಲೀಷನು ವಾಸಿಸಿದ ಮತ್ತು ಕೆಲಸ ಮಾಡಿದ ಸ್ಥಳ ಆದಾಗಿತು) ಮತ್ತು ಯುದಾಯದ ದಕ್ಷಿಣದಲ್ಲಿನ ಅರಸರ ಸಮಯದಲ್ಲಿ ಇದು ನಡೆಯಿತು. ಯೆಹೋರಾಮನ ಆಳ್ವಿಕೆಯು ಇಸ್ರಾಯೇಲಿ ನಲ್ಲಿರುವ ಆರಂಭದಲ್ಲಿ, ತನ್ನ ತಂದೆಯೊಡನೆ ರಾಜ್ಯ ವಾಳುತ್ತಿದ್ದ ಇನ್ನೊಬ್ಬ ಯೋರಾಮನು ಯುದಾಯಲ್ಲಿದ್ದನು (ಹೋಲಿಸಿರಿ 2 ಅರಸು 1:17 ಮತ್ತು 3:1). ಎಂಥ ಗಲಿಬಿಲಿ! ನಾವು ಇವರನ್ನು ಯುದಾಯದ (ದಕ್ಷಿಣದ) ಅರಸನಾದ "ಯೆಹೋರಾಮ" ಎಂದು ಕರೆದರೆ ನಮಗೆ ಇದು ಸಹಾಯಿಸಬಹುದು ಆದರೆ ಚಿಕ್ಕದಾಗಿ ಕರೆಯಲ್ಪಟ್ಟ ಹೆಸರು ("ಯೋರಾಮ") ಇಸ್ರಾಯೇಲ್ಯರ (ಉತ್ತರದಲ್ಲಿನ) ಅರಸನನ್ನು ಸೂಚಿಸುವಂತಹದ್ದಾಗಿತ್ತು.

ಎರಡನೆಯ ಅರಸು 3 ಯೋರಾಮನ ಕಥೆಯನ್ನು (ಇಸ್ರಾಯೇಲಿನ ಅರಸು) ಎತ್ತಿಕೊಳ್ಳುತ್ತದೆ 1:17ರಲ್ಲಿ:

> ಯೆಹೂದ್ಯರ ಅರಸನಾದ ಯೆಹೋಷಫಾಟನ ಆಳ್ವಿಕೆಯ ಹದಿನೆಂಟನೆಯ ವರುಷದಲ್ಲಿ ಆಹಾಬನ ಮಗನಾದ ಯೋರಾಮನು ಇಸ್ರಾಯೇಲ್ಯರ ಅರಸನಾಗಿ ಸಮಾರ್ಯದಲ್ಲಿ ಹನ್ನೆರಡು ವರುಷ (ಸುಮಾರು ಕ್ರಿ.ಪೂ. 852-841) ಆಳಿದನು. ಇವನು ತನ್ನ ತಂದೆತಾಯಿಗಳಷ್ಟು ದುಷ್ಟನಾಗಿರಲಿಲ್ಲವಾದರೂ ಯೆಹೋವನ ದೃಷ್ಟಿಯಲ್ಲಿ ದ್ರೋಹಿ ಯಾಗಿದ್ದನು ತನ್ನ ತಂದೆಯು ಬಾಳನಿಗೋಸ್ಕರ ನಿಲ್ಲಿಸಿದ ಕಲ್ಲಿನ ಕಂಬವನ್ನು ತೆಗೆದುಹಾಕಿದನು (ವಚನಗಳು 1, 2).

ಆಹಾಬನು ಪ್ರತ್ಯಕ್ಷವಾಗಿ ಬಾಳನಿಗೋಸ್ಕರ ಒಂದು ಗುಡಿಯನ್ನು ಕಟ್ಟಿಸಿ ಅದರಲ್ಲಿ ಯಜ್ಞವೇದಿಯನ್ನು ಕಟ್ಟಿಸಿದನು (ನೋಡಿರಿ 1 ಅರಸು 16:32). ಯೋರಾಮನು ಆ ವಿಗ್ರಹಗಳನ್ನು "ತೆಗೆದುಹಾಕಿದನು" ಆದರೆ ನಾಶಪಡಿಸಲಿಲ್ಲ. (ಯೇಹುವು ಅದನ್ನು ನಂತರದಲ್ಲಿ ನಾಶಪಡಿಸಿದನು; ನೋಡಿರಿ 2 ಅರಸು 10:27.) "ಆದರೂ" 2 ಅರಸುಗಳ ಲೇಖಕನು ಹೀಗೆ ಯೋರಾಮನು "ಇಸ್ರಾಯೇಲ್ಯರನ್ನು ಪಾಪಕ್ಕೆ ಪ್ರೇರಿಸಿದ ನೆಬಾಟನ ಮಗನಾದ ಯೆರೊಬ್ಬಾಮನ ಮಾರ್ಗವನ್ನು ಬಿಡಲೆಗೆ ಇಲ್ಲ ಬದಲಾಗಿ" (3:3), "ಬೇತೇಲ ಮತ್ತು ದಾನನಲ್ಲಿ ಸ್ಥಾಪಿಸಿದಂತಹ ಆತನ ಸಂಗತಿಗಳಾದ ಬಂಗಾರದ ಬಸವನ ಮುಂದೆ

ಅಡ್ಡಬೀಳುವದು ಇವುಗಳನ್ನೂ ಇನ್ನೂ ಪ್ರೋತ್ಸಾಹಿಸಿದನು'' ಎಂದು (ನೋಡಿರಿ 1 ಅರಸು 12:26-33; 13:33). ಅದನ್ನು ಹಾಗೆ ಮಾಡುವದು ಆತನಿಗೆ ರಾಜಕೀಯವಾಗಿ ಸಮ ಯೋಚಿತವಾಗಿತ್ತು.

**ಒಂದು ಸಮಸ್ಯೆ**

ಇದು ಹಿನ್ನಲೆಯಾಗಿದ್ದು; ನಾವೀಗ ಕಥೆಗೆ ಸಿದ್ಧರಾಗಿದ್ದೇವೆ. ''ಅನೇಕ ಕುರಿ ಹಿಂಡುಗಳುಳ್ಳವನಾಗಿದ್ದ ಮೋವಾಬ್ಯರ ಅರಸನಾದ ಮೇಷನೆಂಬವನು ಇಸ್ರಾಯೇಲ್ಯರ ಅರಸನಿಗೆ ಲಕ್ಷ ಕುರಿಗಳ ಮತ್ತು 100,000 ಟಗರುಗಳ ಉಣ್ಣೆಯನ್ನು ಕಪ್ಪವಾಗಿ ಕೊಡುತ್ತಿದ್ದನು'' (2 ಅರಸು 3:4).[1] ಮೋವಾಬ, ಇಸ್ರಾಯೇಲಿನ ನೈರುತ್ಯ ದಿಕ್ಕಿನ ಅಂಚಿನಲ್ಲಿ ಇದೆ (1 ಪೂರ್ವಕಾಲವೃತ್ತಾಂತ 18:1, 2). ''ಆದರೆ ಆಹಾಬನು ಮರಣಹೊಂದಿದ ನಂತರ ಇವನು ಇಸ್ರಾಯೇಲ್ಯರ ಅರಸನಿಗೆ ವಿರುದ್ಧವಾಗಿ ತಿರುಗಿಬಿದ್ದನು'' (2 ಅರಸು 3:5; ನೋಡಿರಿ 1:1). ಮೇಷನು ಉಪಯೋಗಿಸಿದ ಗೊಂದಲದ ಅವಧಿಯು ಆಹಾಬನ ಮರಣಾ ನಂತರದ (ಮತ್ತು ಅಹಜ್ಯನ ಕ್ಲುಪ್ತವಾದ ಆಳ್ವಿಕೆಯ ಆರಂಭದಲ್ಲಿ) ಕಾಲೋಚಿತವಾದ ಸಮಯದಂತೆ ಕೀರ್ತನೆಯನ್ನು ಬಾರಿಸುವುದನ್ನು ನಿಲ್ಲಿಸಿತು.

ಯೋರಾಮನು ಸಿಂಹಾಸನಕ್ಕೆ ಬಂದ ಮೇಲೆ, ಆತನು ಆದಾಯದ ಮೌಲ್ಯಯುತವಾದ ಮೂಲಗಳನ್ನು ಪುನಃ ತುಂಬಿಸಲು ಸಂಕಲ್ಪಮಾಡಿಕೊಂಡನು. ಆತನು ಮೊದಲು ಇಸ್ರಾಯೇಲ್ಯನಲ್ಲಿ ಸೈನ್ಯವನ್ನು ಕೂಡಿಸಿಕೊಂಡನು (3:6). ನಂತರ ಯೆಹೂದ್ಯದ ಅರಸನಾದ ಯೆಹೋಷಾಫಾಟನಿಗೆ ಸಂದೇಶವನ್ನು ಕಳುಹಿಸಿದನು (ವಚನ 7ಎ). ಯೋರಾಮನು ಮೋವಾಬ್ಯದ ಮೇಲೆ ದಕ್ಷಿಣದಿಂದ ಆಕ್ರಮಣ ಮಾಡಬೇಕೆಂದಿದ್ದನು (ವಚನ 8) - ಬಹುಶಃ ಮೋವಾಬ್ಯದ ಉತ್ತರದ ಗಡಿಯು ಅದರ ದಕ್ಷಿಣದ ಗಡಿಗಿಂತಲೂ ಹೆಚ್ಚು ಬಾರಿ ಭದ್ರವಾಗಿತ್ತು ಆದರೆ ಹಾಗೆ ಮಾಡಿದ್ದರೆ, ಆತನು ಯುದಾಯದ ಮೂಲಕ ಹಾದುಹೋಗ ಬೇಕಿತ್ತು. ಆತನು ಯೆಹೋಷಾಫಾಟನಿಗೆ: ''ಮೋವಾಬ್ಯರ ಅರಸನು ನನಗೆ ವಿರೋಧವಾಗಿ ತಿರುಗಿ ಬಿದ್ದಿದ್ದಾನೆ; ಮೋವಾಬ್ಯರೊಡನೆ ಯುದ್ಧಮಾಡುವುದಕ್ಕೆ ನೀನು ನನ್ನ ಜೊತೆಯಲ್ಲಿ ಬರುತ್ತೀಯೋ?'' (ವಚನ 7ಬಿ) ಎಂದು ವಿನಂತಿಸಿದನು.

ಯೋರಾಮನ ತಂದೆಯು ಇತ್ತಿಚೆಗೆ ಯೆಹೋಷಾಫಾಟನೊಂದಿಗೆ ಆರಾಮ್ಯರ (ಸಿರಿಯಾ) ವಿರುದ್ಧ ಹೋರಾಡಲು ಸೇರಿಕೊಂಡಿದ್ದನು (ನೋಡಿರಿ 1 ಅರಸು 22:1-40). ಆಹಾಬ ಮತ್ತು ಅಹಜ್ಯನ ನೆಂಟಸ್ತನದ ಸಲುವಾಗಿ ಯೆಹೋಷಾಫಾಟನಿಗೆ ಖಂಡನೆ ಮಾಡಲಾಗಿತ್ತು (ನೋಡಿರಿ 2 ಪೂರ್ವಕಾಲವೃತ್ತಾಂತ 19:1, 2; 20:35-37), ಆದರೆ ಪ್ರತ್ಯಕ್ಷವಾಗಿ ಆತನು ಮಂದ ಗತಿಯಳ್ಳವನಾಗಿದ್ದನು. ಆತನು ಯೋರಾಮನೊಡನೆ ಹೋಗಲು ಒಪ್ಪಿದನು (2 ಅರಸು 3:7ಸಿ; 1 ಅರಸು 22:4 ರೊಂದಿಗೆ ಹೋಲಿಸಿರಿ). ಬಹುಶಃ ಒಂದು ಕಾರಣವೆಂದರೆ ಮೋವಾಬ್ಯವೂ ಇತ್ತಿಚೆಗಷ್ಟೇ ಆತನ ರಾಜ್ಯದ ಮೇಲೆ ಆಕ್ರಮಣ ಮಾಡಿತ್ತು (ನೋಡಿರಿ 2 ಪೂರ್ವಕಾಲವೃತ್ತಾಂತ 20:1-30) ಮತ್ತು ಆತನು ಇನ್ನೂ ಅದಕ್ಕಾಗಿ ಕೋಪದಿಂದಿದ್ದನು.[2]

**ಒಂದ ಯೋಜನೆ**

ಯೆಹೋಷಾಫಾಟನು ಯೋರಾಮನಿಗೆ ''ಯಾವ ಮಾರ್ಗವಾಗಿ (ಮೋವಾಬಿಗೆ) ಹೋಗ ಬೇಕು?'' (2 ಅರಸು 3:8ಎ) ಎಂದು ರಣನೀತಿಯ ಬಗೆಗೆ ಕೇಳಿದನು. ಯೋರಾಮನು ಅದಕ್ಕೆ ''ಎದೋಮ್ಯರ ಅರಣ್ಯ ಮಾರ್ಗವಾಗಿ ಹೋಗೋಣ'' (ವಚನ 8ಬಿ) ಎಂದು ಉತ್ತರಿಸಿದನು. ಆ ಯೋಜನೆಯು ದಕ್ಷಿಣದ ಮೂಲಕ ಯೋದಾಯಕ್ಕೆ ಹೋಗುವುದಾಗಿದ್ದು, ಪೂರ್ವಭಾಗವು ಮೃತ್ಯು ಸಮುದ್ರದ ದಕ್ಷಿಣ ಅಂಚನ್ನು ಹೊಂದಿದ್ದು, ಎದೋಮಿನೊಳಗಡೆಯಲ್ಲಿ

ಇರುವಂತಹದ್ದು ದಕ್ಷಿಣ ಮೋವಾಬ ಆಗಿತ್ತು ("ಎಲೀಷನ ದಿನಗಳಲ್ಲಿ ಇಸ್ರಾಯೇಲು ಮತ್ತು ಸುತ್ತಲಿನ ರಾಜ್ಯಗಳನ್ನು" ತೋರಿಸುವ ನಕಾಶೆಯನ್ನು ಈ ಪಾಠದಲ್ಲಿ ಮತ್ತೊಂದು ಕಡೆ ನೋಡಿರಿ). ಎದೋಮ ಯೂದಾಯದ ಸಾಮಂತ ದೇಶವಾದಾಗಿನಿಂದ, ಅವರು ಯಾವುದೇ ವಿರೋಧವನ್ನು ಆ ದೇಶದಲ್ಲಿ ಕಂಡುಕೊಳ್ಳುತ್ತಿರಲಿಲ್ಲ. ಅವರು ಎದೋಮ್ಯರಲ್ಲಿ ತಮ್ಮ ಹೆಚ್ಚಿನ ಸೈನ್ಯವನ್ನು ಸಹ ಬಿಟ್ಟಿರುತ್ತಿದ್ದರು. ಎದೋಮಿನಿಂದ ಅವರು ಮೋವಾಬದ ದಕ್ಷಿಣ ಭಾಗದ ಮೇಲೆ ಆಕ್ರಮಣ ಮಾಡಬಹುದಿತ್ತು. ಇದು ಒಳ್ಳೆ ತಂತ್ರ ಎನ್ನಿಸುವಂತಿತ್ತು. ದುರದೃಷ್ಟಕರ ಎಂದರೆ ಯಾರೊಬ್ಬರೂ ದೇವರು ಏನು ಯೋಚಿಸುತ್ತಾನೆ ಎಂಬುದನ್ನು ಕೇಳುವತ್ತ ಲಕ್ಷವಹಿಸಲಿಲ್ಲ.

ಮೊದಲು, ಸಂಗತಿಗಳು ಯೋಜನೆಯಂತೆಯೇ ಇದ್ದವು. ಎದೋಮಿನ ಅರಸನು ಮತ್ತು ಆತನ ಸೈನಿಕರು ತಮ್ಮ ಸೇನೆಯನ್ನು ಕೂಡಿಕೊಂಡಿದ್ದಲ್ಲಿಗೆ[3] (ವಚನ 9ಎ). ಯೋರಾಮ ಯೆಹೋಷಾಫಾಟ ಮತ್ತು ಅವರ ಸೇನೆಗಳು ಎದೋಮನ್ನು ತಲುಪಿದವು. ಅವರು ಮೋವಾಬಿನ ದಕ್ಷಿಣದ ಗಡಿಯನ್ನು ತಲುಪಲು ತಮ್ಮ ಮಾರ್ಗದುದ್ದಕ್ಕೂ ಎದೋಮಿನವರ ಅರಣ್ಯದೊಳಕ್ಕೆ ನೂಕಲ್ಪಟ್ಟರು.

**ದುರವಸ್ಥೆ**

ಅವರು ಅಲ್ಲಿ ತಲುಪಿದಂತಹ ಸಮಯದಲ್ಲಿ "ಎದೋಮಿನ ಅರಣ್ಯವು" ಮೋವಾಬ್ಯರ ಕಣ್ಣಿಗೆ ಕಾಣುವಂತಿತ್ತು (ನೋಡಿರಿ ವಚನಗಳು 21-24), ಆದ್ದರಿಂದ ಅವರು ಏಳು ದಿನಗಳವರೆಗೆ ಸುತ್ತಾದ ಪ್ರಯಾಣಮಾಡಿದರು (ವಚನ 9ಎ) ಮತ್ತು ನೀರಿನ ಸರಬರಾಜು ಇಳಿಮುಖವಾಯಿತು. ಸಾಮಾನ್ಯವಾಗಿ ಅವಲಂಭಿತವಾದ ನದಿಗಳುರಾಜ್ಯಗಳ ಮೂಲಕ ಹರಿಯುತ್ತಿದ್ದವು ಎಂಬುದನ್ನು ಇದಕ್ಕೆ ಚಿರಪರಿಚಿತರಾದ ಭೌಗೋಳಿಕ ತಜ್ಞರು ನಮಗೆ ಹೇಳಬಹುದು. ಸೇನೆಯ ನೀರಿನ ಸರಬರಾಜನ್ನು ಆ ಹಳ್ಳದಿಂದ ಮತ್ತೆ ಭರ್ತಿಮಾಡುವದನ್ನು ಗಣನಗೆ ತರುವಲ್ಲಿ ಯೋರಾಮನಿಗೆ ಯಾವ ಸಂಶಯವೂ ಇರಲಿಲ್ಲ ಆದರೆ ಅದು ಒಣಗಿತ್ತು.[4] "ಮಾರ್ಗದಲ್ಲಿ ಅವರ ಸೈನಿಕರಿಗೂ ಅವರು ತಂದ ಪಶುಗಳಿಗೂ ನೀರು ಸಿಕ್ಕದೇ ಹೋಯಿತು" (ವಚನ 9ಸಿ). ಸಾಮಾನ್ಯವಾಗಿ ಮಾನವ ಜೀವಿಗಳು ಗಾಳಿಯಿಲ್ಲದೇ ಮೂರು ನಿಮಿಷ, ನೀರಿಲ್ಲದೇ ಮೂರು ದಿನ, ಮತ್ತು ಆಹಾರವಿಲ್ಲದೇ ಮೂರು ವಾರಗಳವರೆಗೆ ಇರಬಲ್ಲವು.[5] F. W. Krummacher ಆ ಸನ್ನಿವೇಶವನ್ನು ಸಂಕ್ಷಿಪ್ತವಾಗಿ ಒಂದು ವಾಕ್ಯದಲ್ಲಿ ವರ್ಣಿಸಿದ್ದಾರೆ: "ಮೂರ್ಛೆ ಹೋಗುತ್ತಿದ್ದ ಯೋಧರು ಮೇಲುಸಿರು ಬಿಡುತ್ತಾ ಭೂಮಿಯ ಮೇಲೆ ಬಿದ್ದರು; ಕುದುರೆಗಳು ಆಯಾಸ ಮತ್ತು ಬಳಲಿಕೆಯಿಂದ ಬಳಲಿ, ಮುಂದಕ್ಕೆ ಹೋಗದಾದವು, ಮತ್ತು (ಕತ್ತೆಗಳು) ತಮ್ಮ ಮೇಲಿನ ಭಾರದಡಿಯಲ್ಲಿ ದಣಿವಿನಿಂದ ಕುಗ್ಗಿದವು."[6] ಒಂದು ಹನಿ ರಕ್ತವು ಚೆಲ್ಲುವ ಮೊದಲೇ ನಂಟಸ್ತಿಕೆಯು ಸೋಲನ್ನು ಎದುರಿಸಿತು.

ಯೋರಾಮನ ಪ್ರತಿಕ್ರಿಯೆಯು ನಂಬಿಕೆಯಲ್ಲಿ ಅಶಕ್ತರಾಗಿರುವವರಿಗೆ ಅಥವಾ ನಂಬಿಕೆಯಿಲ್ಲದವರಿಗೆ ಸೂಚಕವಾಗಿತ್ತು: ಆತನು ದೇವರನ್ನು ದೂಷಿಸಿದನು. ಆತನು "ಅಯ್ಯೋ! ಯೆಹೋವನು ಮೂರು ಮಂದಿ ಅರಸರಾದ ನಮ್ಮನ್ನು ಮೋವಾಬ್ಯರ ಕೈಗೆ ಒಪ್ಪಿಸುವುದಕ್ಕೋಸ್ಕರ ಇಲ್ಲಿಗೆ ಬರಮಾಡಿದ್ದಾನೆ" (ವಚನ 10) ಎಂದು ಹೇಳಿದನು. ಆತನ ಕಲ್ಪನೆಗಳನ್ನು ಗಮನಿಸಿರಿ:

- ದೇವರು ಆತನ ದುಡುಕತನವನ್ನು ಮೊದಲ ಸ್ಥಳದಲ್ಲಿಯೇ ಒಪ್ಪಿಕೊಂಡಿದ್ದಾನೆ.
- ಅವರನ್ನು ಈ ಸ್ಥಳಕ್ಕೆ ತಂದಂತಹ ಈ ವಿನಾಶಕರವಾದ ಯೋಜನೆಗೆ ಜವಾಬ್ದಾರನು.
- ಅವರನ್ನು ನಾಶಮಾಡಲೆಂದೇ ದೇವರು ಈ ಎಲ್ಲವುಗಳನ್ನು ಮಾಡಿದನು.

ಈಗ ಆ ನಿಜಾಂಶಗಳನ್ನು ಅವಲೋಕಿಸೋಣ:

- ಈ ಯಾತ್ರೆಯ ಬಗೆಗೆ ಕರ್ತನನ್ನು ಯಾವುದೇ ರೀತಿಯಲ್ಲಿ ಸಂಪರ್ಕಿಸಿರಲಿಲ್ಲ.
- ವಿನಾಶಕರವಾದ ಯೋಜನೆಯು ಯೋರಾಮನಿಂದಲೆ ತಾನೆ ಮಾಡಲ್ಪಟ್ಟ ಯುಕ್ತಿ ಆಗಿತ್ತು.
- ಅವರನ್ನು ನಾಶಮಾಡುವ ಬದಲು, ದೇವರು ಅವರನ್ನು ಅವರ ಸ್ವಂತ ಮೂರ್ಖತನದಿಂದ ಬಿಡುಗಡೆ ಮಾಡಿದನು.

**ಪ್ರವಾದಿ**

ಸುದೈವಷಾತ್, ಯೋರಾಮನಿಗಿಂತ ಉತ್ತಮ ಗಟ್ಟಿ ತಳಹದಿಯ ಯೆಹೋವನ ಜ್ಞಾನವನ್ನು ಹೊಂದಿದವನೊಬ್ಬನು ಅಲ್ಲಿ ಉಪಸ್ಥಿತನಿದ್ದನು. ತನ್ನ ಹಿರಿಯ ಮುತ್ತಜ್ಜನಾದ ದಾವೀದನಲ್ಲಿನ ನಂಬಿಕೆಯನ್ನು ಇನ್ನೂ ಉಳಿಸಿಕೊಂಡಿದ್ದ ಯೆಹೋಷಾಫಾಟನು "ಯೆಹೋವನ ಸನ್ನಿಧಿಯಲ್ಲಿ ನಮಗೋಸ್ಕರ ವಿಚಾರಿಸಬಲ್ಲವನಾದ ಒಬ್ಬ ಪ್ರವಾದಿಯು ಇರುವುದಿಲ್ಲವೋ?" ಎಂದು ಕೇಳಿದನು (ವಚನ 11ಎ; 1 ಅರಸು 22:7ರೊಂದಿಗೆ ಹೋಲಿಸಿರಿ). "ಕಾಲ ಮಿಂಚುವ ಮುನ್ನ" ಎಂಬ ಒಂದು ಹಳೆಯ ಗಾದೆಯು ನನ್ನ ಮನದಲ್ಲಿ ಬರುತ್ತದೆ.

ಅವರೊಂದಿಗೆ ದೇವರ ಪ್ರವಾದಿಯು ಇದ್ದಾನ್ನೋ ಇಲ್ಲವೋ ಎಂಬುದು ಅರಸನಿಗೆ ಗೊತ್ತಿರುವವರೂ ಒಬ್ಬರೂ ಇರಲಿಲ್ಲ, ಆದರೆ ಒಬ್ಬ ಸೇವಕನು ಅದನ್ನು ಮಾಡಿದನು. ಆತನು "ಶಾಫಾಟನ ಮಗನೂ ಎಲೀಯನ ಕೈಗೆ ನೀರು ಕೊಡುತ್ತಿದ್ದವನೂ ಆದ ಎಲೀಷನೆಂಬ ಪ್ರವಾದಿಯು ಇಲ್ಲಿರುತ್ತಾನೆ" (ವಚನ 11ಬಿ) ಎಂದು ಉತ್ತರಕೊಟ್ಟನು. ಎಲೀಷನು ಆ ಸೇನೆಯೊಡನೆ ಯಾಕೆ ಪ್ರಯಾಣಿಸಿದನು ಎಂಬುದರ ಬಗೆಗೆ ನಮಗೆ ಖಚಿತತೆ ಇಲ್ಲ. ಸಮಸ್ಯೆಯು ಉದ್ಭವಿಸಬಹುದು ಮತ್ತು ಆತನ ಮನುಷ್ಯನು ಆ ದೃಷ್ಯದಲ್ಲಿ ಬೇಕಾಗಬಹುದು ಎಂದರು.[7]

ಎಲೀಷನ ಸೇವೆಯು ಇಸ್ರಾಯೇಲಿನಲ್ಲಿತ್ತು, ಯೂದಾಯದಲ್ಲಲ್ಲ, ಪ್ರತ್ಯಕ್ಷವಾಗಿ ಯೆಹೋಷಾಫಾಟನು ಅವನ ಬಗ್ಗೆ ಕೇಳಿದ್ದನು ಮತ್ತು ಅದ್ಭುತವಾದ ಪ್ರವಾದಿ ಎಂದು ಆತನನ್ನು ಅರಿತಿದ್ದನು. ಆತನು "ಅವನು ಹೇಗೋ ಯೆಹೋವನ ಉತ್ತರವನ್ನು ತಿಳಿಸುವನು" (ವಚನ 12ಎ) ಎಂದು ಹೇಳಿದನು. NCV ಯಲ್ಲಿ "ಆತನು ಯೆಹೋವನ ಸತ್ಯವನ್ನು ತಿಳಿಸುವನು" ಎಂದಿದೆ.

ನಿಯಮದಂತೆ, ಅರಸನು ದೂತರನ್ನು ಆತನನ್ನು ತಮ್ಮ ಸನ್ನಿಧಿಯಲ್ಲಿ ಕರೆತರಲು ಕಳುಹಿಸಿದನು. ಮೂವರ ಅರಸರು ನಿರಾಶೆಯ ನೀರಿಲ್ಲದ ಮರಳುಭೂಮಿಯಂತೆ ಕಾಣುತ್ತಿದ್ದು ವಾಸ್ತವವಾಗಿ ಅವರು ತಮ್ಮನ್ನು ತಾವು ನಮ್ರರಾಗಿ ಮಾಡಿಕೊಂಡರು ಮತ್ತು "ಎಲೀಷನ ಬಳಿಗೆ ಹೋದರು" (ವಚನ 12ಬಿ). ಇದು ದೃಷ್ಟಿಸುವ ದೃಷ್ಯವಾಗಿರಬಹುದು: ಮೂವರು ದೋಚಲ್ಪಟ್ಟ ಅರಸರು ವಿನಮ್ರನಾದ ರೈತನ ಮುಂದೆ ನಿಂತಿದ್ದಾರೆ.

ಒಂದು ಕ್ಷಣದಲ್ಲಿ, ಪರಿಸ್ಥಿತಿಯನ್ನು ಗಮನಿಸಿರಿ: ಸಾವಿರಾರು ಸಂಖ್ಯೆಯಲ್ಲಿರುವ ತರಬೇತು ಹೊಂದಿದ ಕವಚಗಳು ಮತ್ತು ಆಯುಧಗಳೊಂದಿಗಿನ ಸೈನ್ಯವು ಅಲ್ಲಿದೆ. ಅಲ್ಲಿ ಒಬ್ಬ ವ್ಯಕ್ತಿಯನ್ನು ಸೇನೆಯನ್ನು ರಕ್ಷಿಸಲು ಆರಿಸಿದ್ದೇ ಆದರೆ ಅದು ಯಾರಾಗಿರಬಹುದು? ಯಾವುದೇ ಆಯುಧವಿಲ್ಲದ ಮತ್ತು ಕವಚವಿಲ್ಲದ, ಯುದ್ಧವಿಧ್ಯೆಯಲ್ಲಿ ಪ್ರವೀಣನಲ್ಲದ ಒಬ್ಬ ಮನುಷ್ಯನನ್ನು ಶ್ರೇಣಿಯಲ್ಲಿ ಆರಿಸುವದು ಕಚಿತವಾದದ್ದು ಆಗಿದೆ. ಅದಲ್ಲದೇ, ಅವನು ದೇವರು ಉಪಯೋಗಿಸುವ ಮನುಷ್ಯನಾಗಿದ್ದನು.

# ಅಸಂಭವವಾದ ಪರಿಹಾರ (3:13-19)

**ಒಂದು ತೆಗಳುವಿಕೆ**

ಒಂದು ವೇಳೆ ನನ್ನ ಮುಂದೆ ಮೂವರು ಅರಸರು ನಿಂತಿದ್ದಾದರೆ, ನಾನು ಬಹುಶಃ ಮಾತಿಲ್ಲದವನಾಗಿರುತ್ತಿದ್ದೆನು - ಆದರೆ ಎಲೀಷನು ಹಾಗಗಲಿಲ್ಲ. ಅರಸರನ್ನು ಎದುರಿಸುವಿಕೆಯು ಬಂದಾಗ, ಆತನು ತನ್ನ ಪೂರ್ವಾಧಿಕಾರಿಯಂತೆ ಭಯವಿಲ್ಲದವನಾಗಿದ್ದನು.

ಆತನ ಮೊದಲ ಮಾತು ಯೋರಾಮನನ್ನು ನಿರ್ದೇಶಿಸುವಂತಿತ್ತು: "ನನಗೂ ನಿನಗೂ ಗೊಡವೆಯೇನು?" (ವಚನ 13ಎ). CJB ಯಲ್ಲಿ "ನೀನು ಮತ್ತು ನಾನು ಸಹಜವಾದದರಲ್ಲಿ ಇದ್ದೇವೆಯೋ?" ಎಂದಿದೆ. ಎಲೀಷನು ಅರಸನಿಗೆ, "ನಿನ್ನ ತಂದೆ [ಆಹಾಬ] ತಾಯಿಗಳ [ಈಜೆಬೇಲಳ] ಪ್ರವಾದಿಗಳ ಬಳಿಗೆ ಹೋಗು" (ವಚನ 13ಬಿ). ಯೋರಾಮನು ಸಾಂಕೇತಿಕ ವಾದ ರೂಪದಲ್ಲಿ ಬಾಳನ ಮೂರ್ತಿಯನ್ನು ತೆಗೆಯುವದನ್ನು (ವಚನ 2), ಆದರೆ ಬಾಳನ ಆರಾಧಕರನ್ನು ಅಳಸಿಹಾಕಲು ಆತನು ಯಾವುದೇ ತರದ ಶ್ರಮವನ್ನು ಪಟ್ಟಿರಲಿಲ್ಲ (ನೋಡಿರಿ 10:19). ಯೋರಾಮನ ತಾಯಿ ಈಜೆಬೇಲಳು, ಇನ್ನೂ ಜೀವದಿಂದ ಇದ್ದಳು, ಮತ್ತು ಆಕೆಯು ಧರ್ಮಾಂಧತೆಯಿಂದ ಕೂಡಿದ ಬಾಳನ ಆರಾಧಕಳಾಗಿದ್ದಳು. ಬಾಳನ ಹಿಂಬಾಲಕರು ಆತನೊಬ್ಬ ಸೃಷ್ಟಿಯ ದೇವರು ಎಂದು ಮಳೆಯನ್ನು ತರುವವನು ಎಂದೂ ನಂಬುತ್ತಿದ್ದರು ಎಂಬುದನ್ನು ಗಮನದಲ್ಲಿಟ್ಟುಕೊಳ್ಳಿರಿ. ಎಲೀಷನು, ಇದಕ್ಕಾಗಿಯೇ, ಯೋರಾಮನಿಗೆ "ಬಾಳನು ನಿಜ ದೇವರಾಗಿದ್ದರೆ ನೀನೇಕೆ ಆತನ ಬಳಿಗೆ ನೀರಿಗಾಗಿ ಹೋಗಬಾರದು? ನನ್ನ ಬಳಿಗೆ ಬರುವುದರ ಬದಲು ಆತನ ಪ್ರವಾದಿಯ ಬಳಿಗೆ ಹೋಗಬಾರದೇ?" ಎಂದು ಹೇಳಿದನು.

ಎಲೀಷನ ಸವಾಲಿನ ಅವಶ್ಯಕತೆಯು ಇಂದು ಪ್ರತಿಯೊಂದು ಭೂಮಿಯಲ್ಲಿ ಪ್ರತಿಧ್ವನಿಸುತ್ತಿದೆ. ಮಿಲಿಯನಗಟ್ಟಲೆ ಜನರು ತಮ್ಮ ಜಗತ್ತಿನ ಮಹತ್ವಾಕಾಂಕ್ಷೆ ಅಹಲ್ಹಾದತೆ ಮತ್ತು ಯಶಸ್ಸಿನ "ದೇವರಿಂದ" ಯೆಹೋವನಿಂದ ತಿರುಗಿಕೊಂಡಿದ್ದಾರೆ. ಇತರರು ನಂಬುವುದೇನೆಂದರೆ ಮನುಕುಲದ "ರಕ್ಷಣೆಯು" ವಿಜ್ಞಾನದಲ್ಲಿ, ವಿದ್ಯೆಯಲ್ಲಿ, ಮತ್ತು ತಂತ್ರಜ್ಞಾನದಲ್ಲಿ ಅಡಗಿದೆ ಎಂದು. ಅದಲ್ಲದೇ, ವಿನಾಶನವು ಹೊಡೆದಾಗ, ಆ ಆಧುನಿಕ "ದೇವರುಗಳು" ಬಲು ಹಿಂದಿನ ಬಾಳನಂತೆಯೇ ನಿಷ್ಪ್ರಯೋಜಕರಾಗಿರುತ್ತಾರೆ. ಹೀಗೆ ಕೆಲವರು ತಮ್ಮ ಮೊಣಕಾಲುಗಳ ಮೇಲೆ ನಡೆಯುವರು ಮತ್ತು "ದೇವರೇ ಸಹಾಯಿಸು" ಎಂದು ಕೂಗುವರು. ಆತನ ಪ್ರತಿಕ್ರಿಯೆಯು "ನೀನು ನನ್ನ ಬಳಿಗೆ ಬಂದಿದ್ದೇಕೆ? ದಿನನಿತ್ಯವೂ ನೀನು ಆರಾಧಿಸಲು ನೀನು ಹೊಂದಿರುವ ದೇವರ ಹತ್ತಿರ ಹೋಗು! ಅವುಗಳೇ ನಿನಗೆ ಸಹಾಯಮಾಡಲಿ! ಎಂದು ಹೇಳಿದ್ದಾದರೆ ಎಂಥ ದುಃಖಕರವಾದದ್ದಲ್ಲವೇ!"

ಎಲೀಷನ ಬಲವಾದ ಮಾತುಗಳು ಯೋರಾಮನನ್ನು ವಿನಮ್ರನಾಗುವಂತೆ ಸೂಚಿಸುವಂತವುಗಳಾಗಿದ್ದವು. ಅರಸನು "ಹಾಗನ್ನಬೇಡ; ಯೆಹೋವನು ಈ ಮೂರು ಮಂದಿ ಅರಸರಾದ ನಮ್ಮನ್ನು ಮೋವಾಬ್ಯರ ಕೈಗೆ ಒಪ್ಪಿಸುವುದಕ್ಕೋಸ್ಕರ ಇಲ್ಲಿಗೆ ಬರ ಮಾಡಿದನಲ್ಲವೋ" (ವಚನ 13ಸಿ). ಈ ಪ್ರತಿಕ್ರಿಯೆಯು ಆತನ ನೈಜವಾದ ಅಭಿಪ್ರಾಯದಂತೆ ಧ್ವನಿತವಾಗಿದೆ (ವಚನ 10), ಆದರೆ ಬಹುಶಃ ಭಿನ್ನವಾದ ಒತ್ತಿ ಹೇಳುವಿಕೆಯನ್ನು ನಾವು ಇಲ್ಲಿ ಕೇಳುವವರಾಗಿದ್ದೇವೆ. ಯೋರಾಮನು ತಾನು ಯೆಹೋವ ನಿಂದ ಯಾವದೇ ಸಮಾಲೋಚನೆಗೆ ಯೋಗ್ಯನಾಗಲ್ಲ ಎಂಬುದನ್ನು ಒಪ್ಪಿಕೊಂಡನು, ಆದರೆ ಅಲ್ಲಿ ಒಬ್ಬನಲ್ಲ ಮೂವರು ಅರಸರು ದಾರುಣವಾದ ಸಂದಿಗ್ಧತೆಯಲ್ಲಿದ್ದರು. ಆದ್ದರಿಂದ ಆತನು "ನನ್ನ ದೋಷಕ್ಕೆ ಎಲ್ಲರನ್ನು ಶಿಕ್ಷಿಸಬೇಡ" ಎಂದು ಹೇಳುತ್ತಿದ್ದಾನೆ. "ಒಂದು ಪ್ರಾಚೀನಕಾಲದ ಭಾಗವು ಇಲ್ಲಿ ಸೇರಿಸಲ್ಪಟ್ಟಿದೆ" ಅದು "ನನ್ನನ್ನು ದೈವದ್ರೋಹದ ಈ ಪಾಪವನ್ನು ಜ್ಞಾಪಕಕ್ಕೆ ತರಬೇಡ, ಆದರೆ ನನಗಾಗಿ ಕರುಣೆಯನ್ನು ಕೇಳಿಕೋ ಎಂದು ನಾನು ಪ್ರಾರ್ಥಿಸುವವನಾಗಿದ್ದೇನೆ"[8] ಎಂಬುದೇ.

ಎಲೀಷನು ಇನ್ನೂ ವ್ಯಗ್ರನಾಗಿಯೇ ಇದ್ದನು. ಆತನು "ನಾನು ಸನ್ನಿಧಿಸೇವೆ ಮಾಡುತ್ತಿರುವ ಸೇನಾಧೀಶ್ವರನಾದ ಯೆಹೋವನಾಣೆ, ಯೆಹೂದ್ಯರ ಅರಸನಾದ ಯೆಹೋಷಾಫಾಟನು ನಿನ್ನ ಜೊತೆಯಲ್ಲಿರದ್ದರೆ ನಾನು ನಿನ್ನನ್ನು ನೋಡುತ್ತದ್ದಿಲ್ಲ, ಲಕ್ಷಿಸುತ್ತಿದ್ದಿಲ್ಲ" (ವಚನ 14) ಎಂದು ಹೇಳಿದನು. CJB ಯಲ್ಲಿ "ಇದನ್ನು ಲಕ್ಷಕ್ಕೆ ತಂದುಕೋ" ಎಂದಿದೆ.

ಯೆಹೋಷಾಪಾಟನು ಪರಿಪೂರ್ಣನಾಗಿರಲಿಲ್ಲ (ನೋಡಿರಿ 1 ಅರಸು 22:43ಬಿ), ಆದರೆ ಆತನು ಯೆಹೋವನಲ್ಲಿ ಮೂಲ ನಂಬಿಕೆಯನ್ನು ಕಾದುಕೊಂಡು ಬಂದಿದ್ದನು (ನೋಡಿರಿ 1 ಅರಸು 22:43ಎ; 2 ಪೂರ್ವಕಾಲವೃತ್ತಾಂತ 17:3-6; 19:4-11; 20:5-21). ಬಲು ಮುಖ್ಯವಾದದ್ದೆಂದರೆ ಆತನು ದಾವೀದನ ವಂಶಸ್ಥನಾಗಿದ್ದನು, ಮತ್ತು ದಾವೀದನ ಮನೆಯನ್ನು ಆತನ ಪ್ರೀತಿ ಪೂರ್ವಕವಾದ ಕರುಣೆಯು ಬಿಟ್ಟು ಹೋಗುವುದಿಲ್ಲವೆಂದು ದೇವರು ಪ್ರಮಾಣಮಾಡಿದ್ದನು (2 ಸಮುವೇಲ 7:15, 16). ಇದು ಒಳ್ಳೇಯ ಮನುಷ್ಯನು ವಾಸಿಸಿದ್ದುರ ಪ್ರಭಾವವಾಗಿತ್ತು! ಈ ಪಾಠದ ಶೀರ್ಷಿಕೆಯು "ಸೈನ್ಯವನ್ನು ರಕ್ಷಿಸಿದ ಮನುಷ್ಯ" ಎಂದಿದೆ. ನಿಜವಾಗಿ ಹೇಳಬೇಕೆಂದರೆ, *ಮೂವರು* ಮನುಷ್ಯರು ಆ ಸೇನೆಯನ್ನು ರಕ್ಷಿಸಲು ಭಾಗಿಯಾಗಿದ್ದರು ಅವರು: ಎಲೀಷ ಯೆಹೋಷಾಫಾಟ, ಮತ್ತು ದಾವೀದ.

**ಒಂದು ವಿನಂತಿ**

ಎಲೀಷನು ಅರಸನಿಗೆ, "ಈಗ ಒಬ್ಬ ವಾದ್ಯಗಾರನನ್ನು ನನ್ನ ಹತ್ತಿರ ಕರಕೊಂಡು ಬನ್ನಿರಿ" (2 ಅರಸು 3:15ಎ) ಎಂದು ಹೇಳಿದನು ಅಂದರೆ "ತಂತಿಯ ವಾದ್ಯಗಳನ್ನು ಬಾರಿಸುವವನು"[9] ಎಂದು NIV ಯಲ್ಲಿ "ಹಾರ್ಪಿಸ್ಟ" ಎಂದಿದೆ. ಎಲೀಷನು ಯಾಕೆ ಹಾಡುಗಾರನನ್ನು ಕರೆದು ಕೊಂಡು ಬಾ ಎಂದನೋ ನಮಗೆ ತಿಳಿಯದು. ಸಂಗೀತದ ಉಪಕರಣಗಳು ಪ್ರವಾದನೆಯ ಜೊತೆಯಲ್ಲಿ ಕಚಿತವಾದ ಸಂಬಂಧವನ್ನು ಹೊಂದಿದ್ದನ್ನು ಸೂಚಿತವಾದದ್ದರಿಂದ (ನೋಡಿರಿ 1 ಸಮುವೇಲ 10:5; 1 ಪೂರ್ವಕಾಲವೃತ್ತಾಂತ 25:3), ಕೆಲವರು ಇವುಗಳು ಹಳೆಯ ಒಡಂಬಡಿಕೆಯಲ್ಲಿನ ಪ್ರವಾದನೆಯ ಅವಿಭಾಜ್ಯ ಅಂಗವಾಗಿವೆ ಎಂದು ಅವರು ತರ್ಕಿಸುತ್ತಾರೆ. ಇದು ಹೇಗೋ, ಇದೊಂದೇ ಸಮಯದಲ್ಲಿ ಎಲೀಷನು ಮಾಡಿದ ವಿನಂತಿಯಾಗಿದೆ.

ಜೀವನದುದ್ದಕ್ಕೂ ತಿರುಗಿಬಿದ್ದು ನಂತರದಲ್ಲಿ ಅದು ಮುಂದುವರೆಯುವುದಕ್ಕಿಂತ ಮೊದಲು ಆರುವ ಅವಶ್ಯಕತೆಯು ಆತನಿಗೆ ಬೇಕಾದ್ದರಿಂದ ಕರ್ತನನ್ನು ಕರೆಯುವ ಯೋರಾಮನ ಉದ್ಧಟತನಕ್ಕೆ ಪ್ರವಾದಿಯು ಬಹುವಾಗಿ ಉದ್ವಿಗ್ನನಾಗಿದ್ದನು. ದಾವೀದನು ಅರಸನಾದ ಸೌಲನನ್ನು ಶಾಂತಗೊಳಿಸಲು ಒಂದು ವಾದ್ಯ ಉಪಕರಣವನ್ನು ಬಾರಿಸಿದನು (1 ಸಮುವೇಲ 16:16, 23), ಮತ್ತು ನಮ್ಮಲ್ಲಿ ಅನೇಕರು "ಸಂಗೀತವು ಕ್ರೂರತೆಯ ಎದೆಯನ್ನು ಸಮಾಧಾನಪಡಿಸುವ ಗುಣವನ್ನು ಹೊಂದಿದೆ"[10] ಎಂದು ಗುರುತಿಸಿದ್ದಾರೆ. (ಅದನ್ನು ನಾನು ಹೀಗೆ ಮಾರ್ಪಾಡಿಸ ಬಯಸುತ್ತೇನೆ: ಕೆಲವು ಸಂಗೀತಗಳು ನನ್ನನ್ನು ಶಾಂತಗೊಳಿಸುತ್ತವೆ, ಆದರೆ ಸಂಗೀತವೆಂದು ಕರೆಯಲ್ಪಡುವ ಕೆಲ ಆಧುನಿಕವಾದವುಗಳು ಅದಕ್ಕೆ ವಿರುದ್ಧವಾದ ಪ್ರಭಾವವನ್ನು ಹೊಂದಿರುತ್ತವೆ!)

**ಒಂದು ಅಗತ್ಯತೆ**

ವಾದ್ಯಗಾರನನ್ನು ಕರೆಯುವುದರಲ್ಲಿ ಎಲೀಷನ ಉದ್ದೇಶವು ಏನೇ ಇರಲಿ, ಅದು ಕೆಲಸಮಾಡಿತು. "ವಾದ್ಯಗಳ ಸ್ವರವನ್ನು ಕೇಳುವಾಗಲೆಲ್ಲಾ ಎಲೀಷನಲ್ಲಿ ಯೆಹೋವನ ಬಲವು ಬರುತ್ತಿತ್ತು" (2 ಅರಸು 3:15ಬಿ). ಅದು ಯೆಹೋವನ ಆತ್ಮವು ಎಲೀಷನ ಮೇಲೆ ಬಂದಿತು ಮತ್ತು ಆಸಂಕಟಕ್ಕೆ ದೇವರ ಪರಿಹಾರವನ್ನು ಕೊಡಲು ಆತನು ಸಮರ್ಥನಾದನು. ಯೆಹೋವನ "ಅಸಂಭವವಾದ ಪರಿಹಾರವು ಏನು"? ಗುಂಡಿಯನ್ನು ಹಗೆಯಿರಿ!

"... ಈ ಹಳ್ಳದಲ್ಲಿ ತುಂಬಾ ಗುಂಡಿಗಳನ್ನು[11] ಮಾಡಿರಿ; ಗಾಳಿಮಳೆಗಳು ಕಾಣದಿದ್ದರೂ ಇದು ನೀರಿನಿಂದ ತುಂಬುವದು. ನೀವೂ ನಿಮ್ಮ ಕುರಿದನಗಳೂ ಎಲ್ಲಾ ಪಶುಗಳೂ ಕುಡಿಯಬಹುದು ಎಂಬುದಾಗಿ ಯೆಹೋವನು ಅನ್ನುತ್ತಾನೆ" (ವಚನಗಳು 16, 17).

ಈ ಹೇಳಿಕೆಯಲ್ಲಿನ "ದನ" ಇವು ಅವರು ತಿನ್ನಲು ತರಲ್ಪಟ್ಟಂತಹ ದನಗಳಾಗಿರಬಹುದು, ಪ್ರಾಣಿಗಳೂ ಕೂಡ ಪ್ರಾಣಿ ಹೊರ ಆಗಿರಬಹುದು. ದೇವರು ಪ್ರತಿಯೊಬ್ಬರಿಗೂ ಪ್ರತಿಯೊಂದನ್ನು ದಯಪಾಲಿಸಿದನು: ಎಲ್ಲರು ನೀರನ್ನು ಕುಡಿದರು.

"ಆತನ ದೃಷ್ಟಿಯಲ್ಲಿ ಈ ಕಾರ್ಯವು ಅಲ್ಪವಾಗಿದೆ" (ವಚನ 18ಎ) ಎಂದು ಎಲೀಷನು ಹೇಳಿದನು. NIV ಯಲ್ಲಿ "ಇದು ಯೆಹೋವನ ದೃಶ್ಠಿಗೆ ಒಂದು ಸರಳ ವಾದ ಕಾರ್ಯವಾಗಿ ಕಂಡುಬಂದಿತು" ಎಂದಿದೆ. ಇದು "ಅಲ್ಪವಾದ ಸಂಗತಿ" "ಸರಳವಾದ ಸಂಗತಿ" ಆಗುತ್ತಾ? ಮತ್ತೆ ಅಲ್ಲಿದ್ದ ಒಣದಾದ ಮತ್ತು ಬಿರುಕುಬಿದ್ದ ನೆಲ, ಸುಡುವ ಸೂರ್ಯ, ಒಣಗಿದ ಗಿಡಗಳು, ಸುಳಿಯೇಳುತ್ತಿರುವ ಧೂಳು, ಕಂಗೆಟ್ಟ ಸೈನ್ಯದ ದೃಷ್ಯವನ್ನು ಮನದಲ್ಲಿ ಚಿತ್ರಿಸಿಕೊಳ್ಳಿರಿ. ಅನೇಕ ಮೈಲಿಗಳವರೆಗೆ ನೀರು ಲಭ್ಯವಿರಲಿಲ್ಲ. ಗಾಳಿ ಅಥವಾ ಮಳೆಯ ಯಾವ ಸೂಚನೆಯೇ ಇರಲಿಲ್ಲ. ಇನ್ನೂ ಎಲೀಷನು ಹೇಳುತ್ತಿದ್ದಾನೆ ಕೊಳ್ಳವು ನೀರಿನಿಂದ ತುಂಬುವದು "ಇದೊಂದು ಅಲ್ಪವಾದ ಕೆಲಸ" ಎಂದಲ್ಲವೇ? ಹೌದು "ಯೆಹೋವನ ದೃಷ್ಟಿಯಲ್ಲಿ" ಇದು ಸಾಧ್ಯ. ದೇವರಿಗೆ ಯಾವುದು "ದೊಡ್ಡ" ಮತ್ತು ಸಣ್ಣದಾದ" ಅದ್ಭುತಗಳು ಇರುವುದಿಲ್ಲ. ಆತನ ದೃಷ್ಟಿಗೆ ಎಲ್ಲವೂ ಒಂದೇ.

ಇಂದು ಅದ್ಭುತಗಳನ್ನು ಮಾಡುತ್ತೇವೆಂದು ಪ್ರತಿಪಾದಿಸುವವರು ಈ ಸಂಗತಿಗಳನ್ನು ಅರಿತುಕೊಳ್ಳಲೇಬೇಕು. ಒಬ್ಬನು "ಸರಳವಾದ" ("ಭಾಷೆಗಳಲ್ಲಿ ಮಾತನಾಡುವಂತಹದು"), ಅದ್ಭುತದೊಡನೆ ಪ್ರಾರಂಭಿಸಿದ್ದಾದರೆ, ನಂತರ ಸ್ಪಷ್ಟವಾಗಿ ಆತನು "ಕಠಿಣವಾದ" ಅದ್ಭುತ ಗಳನ್ನು (ಅಂಗ ಹೀನತೆಯನ್ನು ಹೋಗಲಾಡಿಸುವದು ಅಥವಾ ಸತ್ತವರನ್ನು ಎಬ್ಬಿಸುವದು) ಮಾಡಲು ಸಮರ್ಥರಾಗಬಹುದು. ಒಂದು ವೇಳೆ ಈ ಜನರು ನಿಜವಾಗಿಯೂ ಭಾಷೆಗಳಲ್ಲಿ (ಎಂದಿಗೂ ತಾವು ಅಭ್ಯಾಸಿಸಿದ ಭಾಷೆಗಳಲ್ಲಿ) ಮಾತನಾಡತೊಡಗಿದರೆ, ಅವರು ಸತ್ತವರನ್ನು ಎಬ್ಬಿಸುವಲ್ಲಿಯೂ ಸಮರ್ಥರಾಗುವರು. ಇವೆರಡೂ ದೇವರ ದೃಷ್ಟಿಯಲ್ಲಿ ದೇವರೊಂದಿಗೆ ಆ "ಅಲ್ಪವಾದದ್ದೇ" "ಕಠಿಣವಾದ" ಅದ್ಭುತಗಳನ್ನು ಮಾಡುವುದಕ್ಕಾಗಿನ ಅವರ ಅಸಮರ್ಥತೆಯು ಅದನ್ನು ನಿಜವಾಗಿಯೂ "ಸರಳವಾದದ್ದನ್ನು" ಕೂಡಾ ಮಾಡಲಾರವು ಎಂದು ಸೂಚಿಸುತ್ತದೆ.

ಎಲೀಷನು ಅದಕ್ಕೆ "ಮೋವಾಬ್ಯರನ್ನೂ ನಿಮ್ಮ ಕೈಗೆ ಒಪ್ಪಿಸುವನು" (ವಚನ 18ಬಿ) ಎಂದು ಸೇರಿಸಿದನು. ಆ ಕ್ಷಣದಲ್ಲಿ, ಸೇನೆಗೆ ಅವಶ್ಯವಿದ್ದದ್ದು ಬದುಕಿರುವದು, ಹೊರತಾಗಿ ವಿಜಯವಲ್ಲ ಆದರೆ ದೇವರು ಎರಡನ್ನೂ ವಾಗ್ದಾನಮಾಡಿದನು. ಅದ್ಭುತವು ಅವರ ಜೀವಿತ ವನ್ನು ರಕ್ಷಿಸಿತು, ಮೋವಾಬ್ಯರ ಅಪಜಯವನ್ನೂ ಸಹ ಮಾಡಿತು. ಒಬ್ಬನು ಎರಡು ಉದ್ದೇಶ ಗಳನ್ನು ಹೊಂದಿರುವಾಗ ಅದ್ಭುತಗಳು ಯಾಕೆ?

ಮೋವಾಬ್ಯವು ಅವರ ಕೈಯಿಂದ ಬಿಡುಗಡೆಯಾಗುವಾಗ ಇಸ್ರಾಯೇಲ್ಯರು "ನೀವು ಅವರ ಕೋಟೆಕೊತ್ತಲುಗಳುಳ್ಳ ಪಟ್ಟಣಗಳನ್ನೂ ವಿಶೇಷವಾದ ಎಲ್ಲಾ ಊರುಗಳನ್ನೂ ಸ್ವಾಧೀನಮಾಡಿಕೊಂಡು ಎಲ್ಲಾ ಹಣ್ಣಿನ ಮರಗಳನ್ನು ಕಡಿದುಹಾಕಿ ಬಾವಿಗಳನ್ನು ಮುಚ್ಚಿ ಬಿಟ್ಟು ಹೊಲಗಳನ್ನು ಕಲ್ಲು ತುಂಬಿಸಿ ಹಾಳು ಮಾಡುವಿರಿ" (ವಚನ 19) ಎಂದು ಯೆಹೋ ವನು ಹೇಳಿದನು. "ಹಣ್ಣಿನ ಮರ" ಬಹುಶಃ ಫಲದಾಯಕವಾದ ಹಣ್ಣಿನ ಮರಗಳಾಗಿರ ಬಹುದು. ಹೊಲಗಳನ್ನು ಕಲ್ಲುಗಳಿಂದ ತುಂಬಿಸುವದು ಎಂಬುದನ್ನು ನೋಡುವಾಗ, ಆ ಪ್ರದೇಶವು ಬಹುಶಃ ಕಲ್ಲುಗಳಿಂದ ತುಂಬಿರಬಹುದು. ಭೂಮಿಯನ್ನು ಸಂಸ್ಕರಿಸುವುದಕ್ಕೆ ಸಿದ್ಧಪಡಿಸಿಕೊಳ್ಳುವುದಕ್ಕಾಗಿ, ಕಲ್ಲುಗಳು ಅಗೆಯಲ್ಪಡಬೇಕು ಮತ್ತು ತೆಗೆಯಲ್ಪಡಬೇಕು ಮತ್ತು ಹೊಲದ ಒಂದು ಕೊನೆಯಲ್ಲಿ ಗುಡ್ಡೆ ಹಾಕಬೇಕು. ಆ ಕಲ್ಲುಗಳನ್ನು ಹೊಲದಲ್ಲಿ ಹಿಂದಕ್ಕೆ

ಇಡುವದು ಅದು ತಿರುಗಿ ಉಪಯೋಗಕ್ಕೆ ಬಾರದಂತೆ ಮಾಡುವದೇ ಆಗಿದೆ. ಕಾರ್ಯವಿಧಾನದ ರೂಪರೇಷೆಯನ್ನು ಕೆಲಸಾರಿ "ವೈರಿಗಳಿಂದ ಉಪಯೋಗಿತವಾದ ಯಾವುದನ್ನೂ ಹಿಂದಕ್ಕೆ ಉಳಿಸಬೇಡ" ಎಂದು "ಯುದ್ಧ ಭೂಮಿಯ ನೀತಿ" ಎಂದು ಕರೆಯಬಹುದು. ಪ್ರತ್ಯಕ್ಷವಾಗಿ, ಮೋವಾಬ್ಯರು ಶಿಕ್ಷೆಗೆ ಯೋಗ್ಯವಾಗಿದ್ದಾರೆ ಎಂದು ದೇವರು ಸಂಕಲ್ಪಿಸಿದ್ದನು (ಯೆಶಾಯ 15 ಮತ್ತು 16 ರೊಂದಿಗೆ ಹೋಲಿಸಿರಿ).[12]

## ಸರಿಸಾಟಿಯಿಲ್ಲದ ಯಶಸ್ಸು (3:20-25ಎ)

**ಪರಿಹಾರ**

ಅರಸನು ಸೈನಿಕರಿಗೆ ಗಂಡಿಗಳನ್ನು ಅಗೆಯಲು ಹೇಳಿದನು. ಯೋರಾಮನು ಇದನ್ನು ನಿರಾಶೆಯಿಂದ ಮಾಡುತ್ತಿದ್ದರೆ ಯೆಹೋಷಾಪಾಟನು ಅದನ್ನು ಎಲೀಷನ ಮೇಲೆ ವಿಶ್ವಾಸದಿಂದ ಮಾಡುತ್ತಿದ್ದನು. ಆತನಿಗೆಅವರ ಪ್ರೇರಣೆಯು ಏನೇ ಇರಲಿ, "ಪ್ರಾತಕಾಲದ ನೈವೇದ್ಯವನ್ನು ಸಮರ್ಪಿಸುವ ಹೊತ್ತಿನಲ್ಲಿ ಫಕ್ಕನೆ ಎದೋಮಿನ ಕಡೆಯಿಂದ ನೀರು ಬಂದು ದೇಶದಲ್ಲೆಲ್ಲಾ ತುಂಬಿಕೊಂಡಿತು" (ವಚನ 20). ಅಲ್ಲಿ ಬಹುಶಃ ದೂರದಲ್ಲಿರುವ ಎದೋಮಿನ ಬೆಟ್ಟದಲ್ಲಿ ರಭಸವಾದ ಮಳೆಯು ಬಿದಿತ್ತು ಮತ್ತು ಉತ್ತರದೆಡೆಯಲ್ಲಿ ನೀರು ರಭಸವಾಗಿ ಹರಿದು ಬಂದು ಸೈನಿಕರು ಇಳಿದುಕೊಂಡಿದ್ದ ಅಗಲವಾದ ಕೊಳ್ಳಗಳಲ್ಲಿ ಬಂದಿರಬಹುದು. ಭೌಗೋಳಿಕ ಪಂಡಿತರು ನಮಗೆ ಹೇಳುವುದೇನೆಂದರೆ, ಕೊಳ್ಳದ ಹರಿವು ಮೃತ್ಯು ಸಮುದ್ರದವರೆಗೆ ಇತ್ತು ಎಂದು. ಆದ್ದರಿಂದ ನೀರು ಇಂಗುವ ಮೊದಲು ಅದನ್ನು ಹಿಡಿದಿಟ್ಟುಕೊಳ್ಳುವುದಕ್ಕಾಗಿ ಗುಂಡಿಗಳನ್ನು ಅಗೆಯುವದು ಅವಶ್ಯವಾಗಿತ್ತು, ಅಲ್ಲಿನ ನಾಟಕೀಯ ಸನ್ನಿವೇಶವನ್ನು J. T. Headley ರವರು ಈ ರೀತಿಯಾಗಿ ಚಿತ್ರಿಸಿದ್ದಾರೆ:

> ದಿನವು ಇಳಿಮುಖವಾಗುತ್ತಾ ಹೋಯಿತು, ಮತ್ತು ಸಂಜೆಯು ಕೆಂಪಾಗಿ ಸೂರ್ಯನು ಮೋಡವಿಲ್ಲದ ಬಾನಿನಲ್ಲಿ ಇಳಿಯುತ್ತಾ ಹೋದನು, ಆತನ ಕೊನೆಯ ಕಿರಣವು ನೀರಿಲ್ಲದ ಅರಣ್ಯದ ಮೇಲೆ ಬೀಳುತ್ತಿತ್ತು. ನಕ್ಷತ್ರಗಳು ಹೊರಗೆ ಬಂದವು, ಪ್ರಶಾಂತವಾದ ಆಕಾಶವು ಬಾಗಿ ದೂರದವರೆಗೂ ಡೇರೆಯ ಮೇಲೆ ಹರಡಿಕೊಂಡು ಆ ಬಾವುಟವು ತಂಗಾಳಿಯಂತೆ ಇತ್ತು, ಮತ್ತು (ಸೋನೆಯು) ಶಿಬಿರ ಹಾಕಿದ್ದಲ್ಲಿ, ನೀರಡಿಕೆಯಿಂದ ಬಿಕ್ಕುತ್ತಿತ್ತು. ನಿದ್ದೆಯಿಂದ ಕೆಳಗೆ ಬೀಳುತ್ತಿತ್ತು. ಆದರೆ ಅವರ ಸುತ್ತ ಇರುವುದೆಲ್ಲವೂ ಶಾಂತವಾಗಿರುವಾಗ, ದೂರದ ಅಂತರದಲ್ಲಿನ ಗುಡ್ಡದಲ್ಲಿ ಮೋಡಗಳು ಮಳೆಯ ಪ್ರವಾಹವನ್ನೆ ಹರಿಸಿದವು. ನದಿಗಳು, ಅವರೆಡೆಯಲ್ಲಿ ಧಾವಿಸಿದವು, ಒಣದಾದ ತೊರೆಗಳು ಮತ್ತು ಹಳ್ಳಗಳು ತುಂಬಿದವು; ಎಂದಿಗೂ ತುಂಬಿ ಹರಿಯದ ಪ್ರವಾಹದ ನೀರಿನಿಂದ ಬೆಳಗಿನ ಜಾವದಲ್ಲಿ ಬಲವಾಗಿ ಅಡೆತಡೆಯಿಲ್ಲದೆ ಕೊಳ್ಳದ ಮೂಲಕ ಪ್ರವಾಹವು ಹರಿಯಿತು. [ಸೈನಿಕರನ್ನು] ಕೊಂಬುಗಳು [ಅವರ] ನಿದ್ರೆಯಿಂದ ಎಚ್ಚರಿಸಿದಾಗ, ಅವರ ಕಣ್ಣು ಹಾಯಿಸದಲ್ಲೆಲ್ಲಾ ಹೊಳೆಯುವ ನೀರನ್ನೆ ಅವರು ಬೇಟಿಯಾದರು. ಮುಂಜಾನೆಯ ಗಾಳಿಯಲ್ಲಿ ಅವರ ದೊಡ್ಡ ಧ್ವನಿಯು ಹೊರಟಿತು, ಮತ್ತು ಅವರ ಇಂಗಿಹೋದ ನೀರಡಿಕೆಯನ್ನು ಹಿಂಗಿಸಲು ಅವರು ಧಾವಿಸಿದರು.[13]

ಇದು ಸಂಭವಿಸಿದ ವಿವರಗಳು "ಪ್ರಾತಃಕಾಲದ ನೈವೇದ್ಯವನ್ನು ಸಮರ್ಪಿಸುವ ಹೊತ್ತಿನಲ್ಲಿ" (ವಚನ 20). ಎಂದಿದ್ದು ಇದು ಅರ್ಥಗರ್ಭಿತವಾದದ್ದಾಗಿದೆ. ಈ ವಿವರಣೆಯು ದಿನದ ಮೊದಲ ಸೂರ್ಯೋದಯದ ಸಮಯದಲ್ಲಿ ಯೆರೂಸಲೇಮಿನ ದೇವಾಲಯದಲ್ಲಿ ಮೊದಲ ಯಜ್ಞವನ್ನು ಇದು ಸೂಚಿಸುವುದಾಗಿದೆ ಎಂಬುದನ್ನು ಅನೇಕರು ಒಪ್ಪುವವರಾಗಿದ್ದಾರೆ. ಬಹುಶಃ ಈ ಪದಗಳು ಸಮಯವನ್ನು ಸೂಚಿಸುವುದಕ್ಕಾಗಿ ಒಳಗೊಂಡಿವೆ; ಆದರೆ ಅದು

ಒಂದು ವೇಳೆ ಇದು ಹಾಗಿದ್ದರೆ ಆದರೆ ಇದನ್ನು ಸರಳ ವಾಗಿ "ಸುರ್ಯೋದಯದ" ಸಮಯದಲ್ಲಿ ಎಂದು ಹೇಳಬಹುದು. ಎದೋಮಿಯ ಮರಭೂಮಿಯಲಿಲ ದೇವರು ಮಾಡಿದ್ದನೇ ಯೆರೂಸಲೇ ಮಿನಲ್ಲಿನ ಯಾಜಕರು ಮಾಡುತ್ತಿದ್ದರೆಂಬುದನ್ನು ಲೇಖಕರು ವಿಚಾರಪೂರ್ವಕವಾಗಿ ಜೋಡಿಸಿ ದ್ದಾರೆ. ನನ್ನ ದೇಶಕ್ಕಾಗಿ ನನ್ನ ಪ್ರಾರ್ಥನೆಗಳು ರಾಜ್ಯಗಳಲ್ಲಿನ ಘಟನೆಗಳ ಮೇಲೆ ನೂರಾರು, ಬಹುಶಃ ಸಾವಿರಾರು ಮೈಲಿಗಳವರೆಗೂ ಪರಿಣಾಮಬೀರಬಹುದಾಗಿದೆ!

**ಪಾಪದ ಫಲ**

ವಾಗ್ದಾನದ ಮೊದಲ ಭಾಗವು ಸಂಪೂರ್ಣವಾಯಿತು: ಸೈನ್ಯಕ್ಕೆ ನೀರು ಸಿಕ್ಕಿತು. ಈಗ ವಾಗ್ದಾನ ಎರಡನೆಯ ಭಾಗವಾದ ಮೋವಾಬ್ಯರು ಅವರ ಕೈಗೆ ಕೊಡಲ್ಪಡುತ್ತಾರೆ ಎಂಬುದರ ಬಗೆಗೆ ಏನು? ಇಸ್ರಾಯೇಲ್ಯರ ಸೈನ್ಯವು ಮೋವಾಬ್ಯದೆಡೆಗೆ ಸಾಗಿ ಬಂದಾಗ, ಮೋವಾಬ್ಯರ "ಅರಸುಗಳು ತಮಗೆ ವಿರೋಧವಾಗಿ ಯುದ್ಧಕ್ಕೆ ಬಂದಿದ್ದಾರೆಂಬುದನ್ನು ಕೇಳಿ ಆಯುಧಗಳನ್ನು ಧರಿಸಿ ಶಕ್ತರಾದ ಎಲ್ಲಾ ಯೌವನಸ್ಥರನ್ನೂ ಪ್ರಾಯಸ್ಥರನ್ನೂ ಕೂಡಿಸಿಕೊಂಡು ತಮ್ಮ ದೇಶದ ಮೇರೆಗೆ ಬಂದರು" (ವಚನ 21). ಮೋವಾಬ್ಯರು ಬಯಲಲ್ಲಿ ಸೇನೆಯನ್ನು ನೋಡಿ ಅದು ನಮ್ಮ ಮೇಲೆ ಶೀರ್ಘದಲ್ಲಿಯೇ ದಾಳಿ ಮಾಡಬಹುದೆಂದು ಆತಂಕಿತರಾದುದರಲ್ಲಿ ಸಂಶಯವೇ ಇಲ್ಲ.

ಮುಂಜಾನೆಯ ವೇಳೆಯಲ್ಲಿ ಗುಂಡಿಗಳು ನೀರಿನಿಂದ ತುಂಬಿಕೊಂಡಿದ್ದವು, ಮೋವಾಬ್ಯ ಸೈನಿಕರು "ಬೇಗನೇ ಎದ್ದರು" ಮತ್ತು ವೈರಿಗಳು ಡೇರೆಹಾಕಿದ ಕೊಳ್ಳದತ್ತ ದೃಷ್ಟಿ ಹಾಯಿಸಿದರು. ಅವರು ನೀರನ್ನು ನೋಡಿದರು, ಆದರೆ ಸನ್ನಿವೇಶವನ್ನು ಅಪಾರ್ಥವಾಗಿ ಅರ್ಥೈಸಿಕೊಂಡರು. "ಸೂರ್ಯಪ್ರಕಾಶದಿಂದ ಆ ನೀರು" ರಕ್ತದಂತೆ ಕೆಂಪಾಗಿ ಕಾಣಿಸುವುದನ್ನು ಮೋವಾ ಬ್ಯರು ನೋಡಿದರು (ವಚನ 22). ಬಹುಶಃ ಆ ನೀರು ರಾಡಿಯಿಂದ ಕೆಂಪಾಗಿರಬಹುದು. ಬಹುಶಃ ಅವರು ಸುತ್ತಲಿನ ಕೊಳ್ಳದ ಮೇಲೆ ಕೆಂಪು ಬಂಡೆಯ ಮೇಲಿನ ಪ್ರತಿಫಲವನ್ನು ಅವರು ನೋಡಿರಬಹುದು. ಬಹುಶಃ ನೀರಿನ ಮೇಲ್ಮೈಯು ಸೂರ್ಯನ ಪ್ರಕಾಶದ ಗುಲಾಬಿ ಹೊಳಪಿನಿಂದ ಪ್ರತಿಫಲಿಸತ್ತಿರಬಹುದು.

ತಾವು ನೀರನ್ನು ನೋಡುತ್ತಿದ್ದೇವೆ ಎಂಬುದನ್ನು ನಂಬಲು ಮೋವಾಬ್ಯರು ಯಾವ ಕಾರಣವೂ ಇರಲಿಲ್ಲ. ನದಿಯು ಒಣಗಿತ್ತು, ಮತ್ತು ರಾತ್ರಿಗೆ ಮುಂಚೆ ಅಲ್ಲಿ ಮಳೆಯೂ ಇರಲಿಲ್ಲ ವೆಂಬುದನ್ನು ಅವರು ಬಲ್ಲವರಾಗಿದ್ದರು (ವಚನ 17). ಅವರು ಮಾಡಿದರು, ಹೇಗೋ, ಅದು ರಕ್ತವೆಂದು ನಂಬುದಕ್ಕೆ ಅವರಿಗೆ ಕಾರಣಗಳಿದ್ದವು. ಅವರು ಮಾಡಿಕೊಂಡ ಸಂಧಾನವು ಅಷ್ಟೇನೂ ಸರಳವಾಗಿರಲಿಲ್ಲ, ಯಾಕೆಂದರೆ ವೈರತ್ವವುಳ್ಳ ದೇಶಗಳ ಮಧ್ಯ ಸಂಧಾನವು ಸ್ಥಾಪಿತ ವಾಗಿದ್ದರಿಂದಲೇ. ಹೀಗೆ ಅವರು "ಅದು ರಕ್ತ ಅರಸರು ತಮ್ಮತಮ್ಮೊಳಗೆ ಜಗಳವಾಡಿ ಸಂಹೃತ ರಾಗಿಬೇಕು" (ವಚನ 23ಎ). ಎಂಬ ನಿರ್ಧಾರಕ್ಕೆ ಬಂದರು. ಈ ಮೊದಲು ಯೂದಾಯದ ಮೇಲೆ ಆಕ್ರಮಣಮಾಡಿದ ಆರಂಭದಲ್ಲಿ (2 ಪೂರ್ವಕಾಲವೃತ್ತಾಂತ 20:23) ಈ ತರದ ವಿನಾಶದ ವಾಸ್ತವತೆಯನ್ನು ಮೋವಾಬ್ಯರು ವೈಯಕ್ತಿಕವಾಗಿ ಅನುಭವಿಸಿದ್ದು ಈ ತರದ ಪರಿಗಣಿಸುವಿಕೆಗೆ ಕಾರಣವಾಯಿತು.

ಮೋವಾಬ್ಯರು ಅತೀ ಸಂತುಷ್ಟರಾದರು. ಅವರು ಒಬ್ಬರಿಗೊಬ್ಬರು "ಮೋವಾ ಬ್ಯರೇ ಏಳಿರಿ, ಸುಲಿಗೆಗೆ ಹೋಗೋಣ" (ವಚನ 23ಬಿ) ಎಂದು ಕೂಗಿದರು. ಅವರು ತಮ್ಮ ಡಾಲುಗಳನ್ನು ಮತ್ತು ಈಟಿಗಳನ್ನು ಇಟ್ಟರು ಮತ್ತು ಸಿಕ್ಕಾಪಟ್ಟೆಯಾಗಿ ಇಸ್ರಾಯೇಲ್ಯರ ಡೇರೆಯೆಡೆಗೆ ಓಡಿದರು. ಕತ್ತಿಯನ್ನು ಒರೆಯಲ್ಲಿಟ್ಟರು, ಅವರ ಮನವು ಈಗ ಯುದ್ಧದಲ್ಲಿ ಇಲ್ಲ, ಆದರೆ ಯ್ಧುದ ಸುಲಿಗೆಯಲ್ಲಿ ಇತ್ತು. ಅವರ ಕಣ್ಣು ಯಾವುದೇ ಅಪಾಯವನ್ನು ನೋಡಲಿಲ್ಲ ಆದರೆ ವೈಭವವನ್ನು ನೋಡಿತು. ಅವರು ಕಾದಾಟದ ಚಿಂತೆಯಿರಲಿಲ್ಲ ಆದರೆ ಡೇರೆಯನ್ನು ಲೂಟಿಮಾಡುವುದಕ್ಕೆ ಮಾತ್ರ.

ಅದೇ ಸಮಯದಲ್ಲಿ ಅವರ ನೀರಡಿಕೆಯನ್ನು ತಣಿಸಿದ ನಂತರ, ಇಸ್ರಾಯೇಲ್ಯರು ತಮ್ಮನ್ನು ತಾವು ಬಚ್ಚಿಟ್ಟುಕೊಂಡರು (ಬಹುಶಃ ಎಲೀಷನಿಂದ ಸೂಚಿಸಲ್ಪಟ್ಟಿರಬೇಕು) ಮತ್ತು ಹೊಂಚು ಹಾಕಿದರು. ಸಂಶಯಪಡದ ವೈರಿ ಸೈನ್ಯವು ಅವರ ಡೇರೆಯನ್ನು ತಲುಪಿದಾಗ, ಅವರು "ಮೋವಾಬ್ಯರನ್ನು ಸೋಲಿಸಿ ಓಡಿಸಿಬಿಟ್ಟರು" (ವಚನ 24ಎ). ಒಮ್ಮಲೇ ಆ ಬಯಲಲ್ಲಿ ನಿಜವಾದ ರಕ್ತವು ಹರಿಯಿತು. ಮೋವಾಬ್ಯರನ್ನು "ಅವರನ್ನು ಸಂಹರಿಸುತ್ತಾ ಅವರ ದೇಶದೊಳಗೆ ನುಗ್ಗಿದರು" (ವಚನ 24ಬಿ). ಇಸ್ರಾಯೇಲ್ಯರು ಮೋವಾಬ್ಯದೊಳಕ್ಕೆ ನುಗ್ಗಿದಂತೆ ಅವರಿಗೆ ಆಜ್ಞಾಪಿಸಲ್ಪಟ್ಟಂತೆ ಅವರು "ಭೂಮಿಯನ್ನು ಬೆಂಗಾಡನ್ನಾಗಿ ಮಾಡುವ ನೀತಿಯನ್ನು" ಕೈಗೆತ್ತಿಕೊಂಡರು (ವಚನ 25ಎ).

## ಯೋಚಿಸದಂತಹ ಫಲಿತಾಂಶ (3:25ಬಿ-37)

ವಿಜಯೋತ್ಸವದ ಟಿಪ್ಪಣಿಯ ಮೇಲೆ ಕಥೆಯನ್ನು ಅಂತ್ಯಗೊಳಿಸಲು ಇದು ಒಳ್ಳೇಯ ಸ್ಥಳ ಎಂದು ಕಾಣುತ್ತದೆ. ಹೇಗೋ, ಯೋಚಿಸದಂತಹ ಫಲಿತಾಂಶವು ಅಲ್ಲಿತ್ತು, ಅಂತ್ಯದಲ್ಲಿ ಜಯವು ಅವರ ಹಿಡಿತದಿಂದ ತಪ್ಪಿತ್ತು.

ವಿಜಯಶಾಲಿಯಾದ ಇಸ್ರಾಯೇಲ್ಯರು ತಾವು ಕಿರ್ಹರೆಷೆತ್‌ವರೆಗೂ ಅವರು ಕಡಿದುಹಾಕುತ್ತಾ ಬಂದರು (ವಚನ 25). CJB ಯಲ್ಲಿ "ಕೊನೆಯಲ್ಲಿ, ಕಿರ್ಹರೆಷೆತ್‌ನಲ್ಲಿ ಮಾತ್ರ ಒಂದು ದುರ್ಗವು ಉಳಿಯಿತು" ಕೀರ್ಹರೆಷೆತ್ ಇಂದಿಗೂ ಕಿರೆಕ್ ಎಂಬ ಹೆಸರಿನಲ್ಲಿ ಗುರುತಿಸಲ್ಪಡುತ್ತಿದ್ದು, ಇದು ಮೃತ್ಯು ಸಮುದ್ರದಿಂದ ಪೂರ್ವಕ್ಕೆ ಸುಮಾರು ಹನ್ನೊಂದು ಮೇಲಿಯಲ್ಲಿ ಇದೆ ("ಎಲೀಷನ ದಿನಗಳಲ್ಲಿ ಇಸ್ರಾಯೇಲು ಮತ್ತು ಸುತ್ತಲಿನ ರಾಜ್ಯಗಳನ್ನು" ತೋರಿಸುವ ನಕಾಶೆಯನ್ನು ಈ ಪಾಠದಲ್ಲಿ ಮತ್ತೊಂದು ಕಡೆ ನೋಡಿರಿ). ಕಿರ್ಹರೆಷೆತ್ "ಮೋವಾಬ್ಯರ ಒಂದು ಪ್ರಮುಖವಾದ ಭದ್ರವಾದ ನೆಲೆಯಾಗಿತ್ತು"[14] (ನೋಡಿರಿ ಯೆಶಾಯ 15:1; 16:7, 11; ಯೆರಮಿಾಯ 48:36). G. Rawlinson ರವರು, ಈ ವಿವರಣೆಯನ್ನು ಕೊಟ್ಟಿದ್ದಾರೆ:

> ಆ ಪರಿಸ್ಥಿತಿಯು ಶ್ರೇಷ್ಟ, ಸೇನಾ ಬಲದ್ದಾಗಿತ್ತು ಆ ಕೋಟೆಯು ಕಡಿದಾದ ಗುಡ್ಡದ ತುದಿಯ ಮೇಲೆ ಕಟ್ಟಲ್ಪಟ್ಟಿದ್ದು, ಆಳವಾದ ಇಕ್ಕಟ್ಟಾದ ಕೊಳ್ಳಗಳಿಂದ ಸುತ್ತುವರೆಯಲ್ಪಟ್ಟಿದ್ದು, ತಿರುಗಿ ಸಂಪೂರ್ಣವಾಗಿ ಗುಡ್ಡಗಳಿಂದ ಆವೃತವಾ ದದ್ದಾಗಿದ್ದು, ಅದಕ್ಕಿಂತ ಎತ್ತರವಾದ ಕೋಟೆಯು ಇನ್ನೊಂದು ಇಲ್ಲವಾಗಿತ್ತು. ನಿಸ್ಸಂಶಯವಾಗಿ ಇದು ಪ್ರಾಚೀನ ಮೋವಾಬ್ಯರ ಆಳ್ವಿಕೆಯ ಬಲವಾದ ಸ್ಥಾನದಲ್ಲಿ ಇದ್ದಿರಬೇಕು.[15]

ಇಸ್ರಾಯೇಲ್ಯರ ಕವಣೆಯು (2 ಅರಸು 3:25ಸಿ) ಅಂಥ ಕೋಟೆಯ ಮೇಲೆ ಅಲ್ಪವಾದ ಪರಿಣಾಮವನ್ನೂ ಹೊಂದಿತ್ತು.

### ನಿರಾಶೆ

ಮೋವಾಬ್ಯರ ಅರಸನಾದ ಮೇಷನು ಕೀರ್ಹರೆಷೆತ್ ಕೋಟೆಯಲ್ಲಿ ಹಿನ್ನಡೆಸಲ್ಪಟ್ಟನು. ಆತನು ನಿರಾಶೆಯಿಂದ ಮುನ್ನಡೆಯಲು ಯತ್ನಿಸಿದನು "ಮೋವಾಬ್ಯರ ಅರಸನು ತಾನು ಯುದ್ಧದಲ್ಲಿ ಗೆಲ್ಲಲಾರನೆಂದು ತಿಳಿದು ಏಳು ನೂರು ಮಂದಿ ಭಟರೊಡನೆ ಸೈನ್ಯದೊಳಗೆ ನುಗ್ಗಿ ಎದೋಮ್ಯರ ಅರಸನ ಕಡೆಗೆ ಹೋಗಲು ಪ್ರಯತ್ನಿಸಿದನು" (ವಚನ 26ಅ). ಬಹುಶಃ ಎದೋಮ್ಯರ ಸೇನೆಯು ಬಲಹೀನವಾದದ್ದೆಂಬ ಕಾರಣದಿಂದ ಇರಬಹುದು. ಬಹುಶಃ ಆತನು ಎದೋಮ, ಮೋವಾಬ್ಯರ ಸಾಮಂತ ರಾಜ್ಯವಾಗಿದ್ದುದರಿಂದ ಆತನು ತನಗಾಗಿ ಹೋರಾಡಲು ಅರಸನನ್ನು ನೇಮಿಸಬಹುದು ಎಂದೂ ಯೋಚಿಸಿರಬಹುದು.

ಆ ಪ್ರಯತ್ನವು ವಿಫಲವಾದ ಮೇಲೆ (ವಚನ 26ಬಿ), ಮೇಷನು ಅಘಾತಕಾರಿಯಾದ

ಸಂಗತಿಯನ್ನು ಮಾಡಿದನು (ಅದು ದೇವರ ಮಕ್ಕಳಿಗೆ ಅಘಾತಕಾರಿಯಾದುದ್ದು): "ಆಗ ಅವನು ತನಗೆ ಬದಲಾಗಿ ಅರಸನಾಗತಕ್ಕ ತನ್ನ ಚೊಚ್ಚಲಮಗನನ್ನು ವಧಿಸಿ ಗೋಡೆಯ ಮೇಲೆ ಸರ್ವಾಂಗ ಹೋಮ ಮಾಡಿದನು" (ವಚನ 27) - ಆ ಯಜ್ಞವು ಮೋವಾಬ್ಯರ "ದೇವರಾದ" ಕೆಮೋಷನಿಗೆ ಆಗಿತ್ತು (ನೋಡಿರಿ ಅರಣ್ಯಕಾಂಡ 21:29; 1 ಅರಸು 11:7, 33; 2 ಅರಸು 23:13; ಯೆರಮೀಯ 48:7, 13, 46). ಯುದ್ಧದಲ್ಲಿ ಸೋಲು ವದು ತಮ್ಮ "ದೇವರು" ತಮ್ಮ ಮೇಲೆ ಕೋಪಗೊಂಡಿದ್ದಾನೆ ಎಂಬುದರ ಪ್ರಮಾಣ ಎಂದು ವಿಗ್ರಹಾರಾಧಕರು ನಂಬುತ್ತಿದ್ದರು. ಆ ಕೋಪವನ್ನು ಶಮನ ಮಾಡುವ ಒಂದು ಮಾರ್ಗ ಎಂದರೆ ಮಾನವ ಬಲಿಯನ್ನು ಅರ್ಪಿಸುವದೇ ಆಗಿತ್ತು. ಮೇಷನ ಸೋಲು ಬಲು ವಿನಾಷಕಾರವಾಗಿದ್ದುದರಿಂದ ಕೆಮೋಷನು ಆತನ ಮೇಲೆ ಬಹುವಾಗಿ ಕೋಪ ಗೊಂಡಿದ್ದನು ಎಂಬ ನಿರ್ಧಾರಕ್ಕೆ ಆತನು ಬಂದನು, ಹೀ ಗಾಗಿ ಆತನು ತನ್ನ ಸಿಂಹಾಸನದ ಉತ್ತರಾಧಿಕಾರಿಯನ್ನು ಆತನಿಗೆ ಬಲಿಯಾಗಿ ಅರ್ಪಿಸಿದನು! ದೇವರ ಧರ್ಮಶಾಸ್ತ್ರವು ಅಂತಹವುಗಳನ್ನು ಖಂಡಿಸುತ್ತದೆ (ನೋಡಿರಿ ಯಾಜಕಕಾಂಡ 18:21; 20:3; ಯೆರಮೀಯ 7:31), ಆದರೆ ಕರ್ತನನ್ನು ಅರಿಯದವರ ಹೃದಯದಲ್ಲಿ ಕತ್ತಲೆಯು ಇತ್ತು.

**ವಿನಾಶನ**

ದುರಂತದ ದೃಷ್ಯದಿಂದ ಹಿಂಸೆಯ ಫಲಿತಾಂಶಕ್ಕೆ ನಾನು ಧಾವಿಸುತ್ತೇನೆ. 2 ಅರಸು 3:27ಬಿ ಪ್ರಕಾರ, "ಇದರಿಂದ ಮೋವಾಬ್ಯರಿಗೆ ಇಸ್ರಾಯೇಲ್ಯರ ಮೇಲೆ ಕೋಪೋದ್ರೇಕ ವುಂಟಾಗಲು ಅವರು ಅವನನ್ನು [ಮೋವಾಬಿನ ಅರಸನನ್ನು] ಬಿಟ್ಟು ತಮ್ಮ ದೇಶಕ್ಕೆ ಹೊರಟುಹೋದರು." ಇಬ್ರಿಯ ಪದವಾದ "ಕೋಪದ್ರೇಕ" ಇದು "ಸಿಟ್ಟು" (CJB) ಎಂದು ಅಥವಾ (NIV) "ಆಕ್ರೋಷ" ಎಂದೂ ಸಹ ಭಾಷಾಂತರಗೊಂಡಿದೆ. ವಿಮರ್ಷಾಕಾರರು ಈ ವಚನದ ಅರ್ಥಕ್ಕಾಗಿ ಭಿನ್ನಾಭಿಪ್ರಾಯವನ್ನು ಹೊಂದಿದ್ದಾರೆ. ಕೆಲವರು "ಕೋಪದ್ರೇಕ ಸಿಟ್ಟು ಆಕ್ರೋಷಗಳು" ಮೋವಾಬ್ಯರ ಕೋಪವಾಗಿದ್ದ ಇವುಗಳು ಮೇಷನ ಕೃತಿಯಿಂದ ಮತ್ತು ಇಸ್ರಾಯೇಲ್ಯರ ಹಿಂಡು ಹಿಂದಿರುಗಿದಾಗ ಎಂದು ಯೋಚಿಸುವವರಾಗಿದ್ದಾರೆ.

ಇನ್ನಿತರರು ಯೋಚಿಸುವುದೇನೆಂದರೆ, "ಕೋಪ" ಎಂಬ ಪದವು ತುಚ್ಛವಾದ ಕಾರ್ಯಕ್ಕೆ ಇಸ್ರಾಯೇಲ್ಯರ ಪ್ರತಿಕ್ರಿಯೆಯನ್ನು ಸೂಚಿಸುವುದಾಗಿದೆ - ಅದು ಅವರು ಏನನ್ನು ನೋಡಿ ದ್ದರೋ ಆ ಸಂಗತಿಯಿಂದ ಅವರು ವಿಚಲಿತರಾಗಿದ್ದರು ಮತ್ತು ನಿರಾಶೆಯಿಂದ ಆ ಸ್ಥಳವನ್ನು ಬಿಟ್ಟರು. ಸೂಚಿಸುವುದೇನೆಂದರೆ "ಫಲಿತಾಂಶವು ಇಸ್ರಾಯೇಲರಿಗೆ ಒಂದು ವಸ್ತುನಿಷ್ಟ ಪಾಠದಂತಿದ್ದು ಅವಳ (ಇಸ್ರಾಯೇಲಿನ) ಮಾರ್ಗವು ವಿಗ್ರಹರಾದನೆಯಿಂದ ತಿರುಗಿಕೊಳ್ಳಲೇ ಬೇಕೆಂಬುದನ್ನು ತೋರಿಸುವುದಾಗಿದೆ ... ಲೇಖಕರು ಕೇಳುವದೇನೆಂದರೆ: ಒಂದು ವೇಳೆ ಇಸ್ರಾಯೇಲ್ಯರು ಈ ಪ್ರಕರಣದಲ್ಲಿ ಆಳವಾಗಿ ಮುಳುಗಿ ಹೋಗಿದ್ದಾದರೆ, ಯಾಕೆ ಅವರು ತನ್ನ ಸ್ವಂತದ ವಿಗ್ರಹವಾಗಿದೆ?"[16]

ಹೇಗೋ, C. F. Keil ಮತ್ತು F. Delitzsch ಅವರು, "ಪ್ರತಿಯೊಂದು ಇತರ ಪ್ರಕರಣಗಳಲ್ಲಿ ಇಂಥ ಪದವು ಕಾಣಿಸುತ್ತದೆ" ಎಂದು ಸೂಚಿಸುತ್ತಾರೆ. ಇಲ್ಲಿ ಉಪಯೋಗಿ ಸಲಾದ ಇಬ್ರಿಯ ಪದವು "ದಿವ್ಯವಾದ ಕೋಪ" ಅಥವಾ "ನ್ಯಾಯತೀರ್ಪು" ಎಂದು ಇಲ್ಲಿ ಸೂಚಿಸಲಾಗಿದ್ದು ಇದು ಮಾನವನು ತನ್ನ ಮೇಲೆ ತಾನೇ ತಂದು ಕೊಳ್ಳು ವಂತಹದ್ದಾಗಿದೆ.[17] ಈ ಪ್ರಕರಣವು ಹೀಗಿರು ವಾಗ, ದೇವರು ಇಸ್ರಾಯೇಲ್ಯರ ಮೇಲೆ ಕೋಪಗೊಳ್ಳಲು ಕಾರಣ ಏನೆಂದರೆ ಅವರು ಮೋ ವಾಬ್ಯದ ಅರಸನನ್ನು ಇಂಥ ಹೀನ ಕೃತ್ಯವನ್ನು ಮಾಡಲು "ಒತ್ತಾಯಿಸಿದ್ದಕ್ಕಾಗಿಯೇ" ಎಂದು ಯೋಚಿಸುವವರಾಗಿದ್ದಾರೆ. ಹೇಗೋ, ಇಸ್ರಾಯೇಲರು ಮಾಡಿದ್ದೆಲ್ಲವೂ ದೇವರು ಮಾಡಲು ಹೇಳಿದ್ದೇ, ಹೀಗಿರುವಾಗ ಇಂಥ ವಿವರಣೆಯು ಅಷ್ಟೊಂದು ಯೋಗ್ಯವಾಗಿ ಕಾಣುವುದಿಲ್ಲ (ವಚನ 19 ಮತ್ತು 25ನ್ನು ಹೋಲಿಸಿರಿ). ಸೂಚಿಸಲ್ಪಟ್ಟ

ಇನ್ನೊಂದು ಹೇಳಿಕೆಯೆಂದರೆ ಯೆಹೋಷಾಫಾಟನು ಮಾಡಿಕೊಂಡ ಉತ್ತರದ ಇಸ್ರೇಲಿನಲ್ಲಿನ ಮತ್ತೊಂದು ಸಂಧಾನದಿಂದ ದೇವರು ಅಸಂತುಷ್ಟನಾಗಿದ್ದನು ಎಂಬ ಸತ್ಯಾಂಶದಿಂದಲೆ.

ನಾನು ಇನ್ನೊಂದು ಸಾಧ್ಯತೆಯನ್ನು ಸೂಚಿಸುತ್ತೇನೆ. ಇಸ್ರಾಯೇಲ್ಯರ ಅರಸನಾದ ಯೋರಾಮ ತಿರುಗಿಬಿದ್ದ ಸ್ವಭಾವದಿಂದಲೆ ದೇವರ ಕೋಪವು ಕಡೆಗೂ ಇಸ್ರಾಯೇಲ್ಯರ ಮೇಲೆ ದಿವ್ಯ ನ್ಯಾಯತೀರ್ಪಿನ ಶಿಕ್ಷೆ ವಿಧಿಸುವದಕ್ಕೆ ಸಮರ್ಥರಾಗುವ ಹಾಗೆ ಮಾಡಿದನು. ಯೋರಾಮನ ದಂಡೆ ಯಾತ್ರೆಯ ಉದ್ದೇಶವು ಆತನ ರಾಜ್ಯಕ್ಕೆ ನೀಡುತ್ತಿದ್ದ ಕರವನ್ನು ಹಿಂದಕ್ಕೆ ಪಡೆಯುವದಕ್ಕಾಗಿ ಮೋವಾಬನ್ನು ಒತ್ತಾಯಿಸುವುದೇ ಆಗಿತ್ತು ಮತ್ತು ಅಷ್ಟು ದೂರಕ್ಕೆ ಹೋಗಲು ದೇವರ ಇಷ್ಟವಿಲ್ಲದ್ದು ಪ್ರಕಟವಾಗಿತ್ತು ಎಂಬುದನ್ನು ಮನದಲ್ಲಿ ಇಟ್ಟುಕೊಳ್ಳಬೇಕು. ಹೀಗೆ ಈ ಸಾಕಾಗದ ಒಟ್ಟು ವಿಜಯದ ನಂತರ ಆತನು ತನ್ನ ಸೈನ್ಯವನ್ನು ಹಿಂದಕ್ಕೆ ತೆಗೆದುಕೊಂಡು ಹೋದನು. ಮೋವಾಬ್ಯರ ಶಿಲೆಯ ಮೇಲೆ, ಮೇಷನು ಈ ಯುದ್ಧದಲ್ಲಿ ಜಯವನ್ನು ಪ್ರತಿಪಾದಿಸಿದನು. ನಮಗೆ ತಿಳಿದಂತೆ, ಮೋವಾಬ್ಯರು ಇಸ್ರಾಯೇಲ್ಯರಿಗೆ ಕರವನ್ನು ಎಂದಿಗೂ ತಿರುಗಿ ಕೊಡಲಿಲ್ಲ. ಇದು ನಮಗೊಂದು ಪಾಠವಾಗಿದೆಯಾ? ಬಹುಶಃ ಇದು ಹೀಗಿರಬಹುದು: ಒಬ್ಬ ಅಯೋಗ್ಯ ಮನುಷ್ಯನು ನಾಶನವನ್ನು ತಂದಾಗ, ಒಬ್ಬ ದೈವಿಕ ಮನುಷ್ಯನು ಯಶಸ್ಸನ್ನು ತರಲು ಹವಣಿಸುತ್ತಾನೆ (ವಚನ 14).

## ಮುಕ್ತಾಯ

ಎಲೀಷನ ಜೀವಿತದ ಈ ಘಟನೆಯಿಂದ ಅನೇಕ ಸತ್ಯಗಳನ್ನು ಕಲಿಯಬಹುದು, ಆದರೆ ನಾನು ಮೂರನ್ನು ಸೂಚಿಸುತ್ತೇನೆ:

- ದೇವರು ರಾಷ್ಟ್ರದ ಬಲವಾಗಿದ್ದಾನೆ (ವಚನ 13).
- ದೈವಿಕ ಸ್ತ್ರೀ ಮತ್ತು ಪುರುಷರು ರಾಷ್ಟ್ರೀಯ ಆಶಾಕಿರಣವಾಗಿದ್ದಾರೆ (ವಚನ 14).
- ಪ್ರಾರ್ಥನೆಯು ರಾಷ್ಟ್ರದ ಜೀವನ ರೇಖೆಯಾಗಿದೆ (ವಚನಗಳು 11, 20ಎ).

ಈ ನಿರಾಕರಿಸಲಾಗದ ಸತ್ಯಾನ್ವೇಷಣೆಯ ಪ್ರಶ್ನೆಗಳಾಗಿವೆ. ನಾವು ನಿಜವಾಗಿ ದೇವರ ಮೇಲೆ ಆತುಕೊಂಡಿದ್ದೇವೆಯಾ ಅಥವಾ ನಾವು ಸ್ವತಹ ಮಾಡಿಕೊಂಡ "ದೇವರ" ಮೇಲೆ ಆತುಕೊಂಡಿದ್ದೇವೆಯಾ? ನಾವು ನಮ್ಮ ರಾಷ್ಟ್ರದ ಮೇಲೆ ಆಶೀರ್ವಾದ ಹೊಂದುವಂತಹ ಸ್ತ್ರೀ ಪುರುಷರಾಗಿದ್ದೇವಾ ಅಥವಾ ಶಾಪ ತರುವಂತಹರಾಗಿದ್ದೇವೆಯಾ? ವಿನಾಶನವು ಅಪ್ಪಳಿಸಿದಾಗ, ನಾವು ಎಲ್ಲಿ ತಿರುಗುತ್ತೇವೆ? ಸರ್ವಶಕ್ತ ದೇವರ ಚಿತ್ತವನ್ನು ತಿಳಿಯುವುದನ್ನು ನೀವು ಎದುರುನೋಡುವವರಾಗಿದ್ದೀರಾ?

---

ಟಿಪ್ಪಣಿಗಳು

[1]ಬರವಣಿಗೆಯನ್ನು ಹೊಂದಿದ ಪ್ರಾಚೀನಕಾಲದ ಕರಿಯ ಕಲ್ಲಾದ ಅಗ್ನಿಶಿಲೆಯ ಮೋವಾಬ್ಯರ ಕಲ್ಲು, ಹೇಳುವುದೇನೆಂದರೆ ಮೇಷನು ಒಮ್ರಿಯ (ಆಹಾಬನ ತಂದೆ) ಕಾಲದಿಂದಲೂ ಇಸ್ರಾಯೇಲ್ಯರೊಂದಿಗೆ ಸಂಘರ್ಷವನ್ನು ಹೊಂದಿರುವುದು ಮೇಷನ ಅಭಿಪ್ರಾಯವಾಗಿತ್ತು. ಈ ಎಲೀಷನ ಕೊನೆಯ ಸಾಲುಗಳು ಬಹುಶಃ 2 ಅರಸು 3ರ ಸೇನೆಯ ಕಾರ್ಯಚರಣೆಯನ್ನು ಸೂಚಿಸುವುದಾಗಿದ್ದು ಅದು ಮೇಷನು ವಿಜಯವನ್ನು ಪ್ರತಿಪಾದಿಸಿದ್ದೇ ಆಗಿದೆ. [2]ಇನ್ನೊಂದು ಸಂಗತಿಯೆಂದರೆ ಯಹೋಷಾಫಾಟನು ತನ್ನ ಮಗನಾದ ಯೋರಾಮನಿಗೆ ಆಹಾಬನ ಮಗಳೂ ಮತ್ತು ಯೋರಾಮನ ಸಹೋದರಿಯಾದ ಅಥೈಲಳನ್ನು ಮದುವೆಯಾಗಲೂ ಒಪ್ಪಿಗೆ ಕೊಟ್ಟನು. ಹೀಗೆ ಯೋರಾಮನು, ಯೆಹೋಷಾಟನಿಗೆ ಒಂದು ರೀತಿಯಲ್ಲಿ "ಕುಟುಂದವನೇ" ಆದನು (ನೋಡಿರಿ 2 ಅರಸು 8:24-27; 2 ಪೂರ್ವಕಾಲವೃತ್ತಾಂತ 18:1). [3]ಎದೋಮ ಸಾಮಂತ ರಾಜ್ಯವಾದ್ದರಿಂದ, ಅದಕ್ಕೆ ನಿಜವಾದ ಅರಸನು ಇರಲಿಲ್ಲ; ಬದಲಾಗಿ

ಉಪಾಧಿಪತಿ (ಗವರ್ನರ್)ಯು ಯೆಹೋಷಾಫಾಟನಿಂದ ನೇಮಿಸಲ್ಪಟ್ಟಿದ್ದನು. ಈ ಉಪಾಧಿಪತಿಗೆ ಹಂಗಾಮಿಯಾಗಿ “ಅರಸ” ಎಂಬ ಹೆಸರನ್ನು ಕೊಡಲಾಗಿತ್ತು (ನೋಡಿರಿ 1 ಅರಸು 22:47). [4]C. F. Keil and F. Delitzsch, “1 and 2 Kings,” *Commentary on the Old Testament*, vol. 3, *1 and 2 Kings, 1 and 2 Chronicles, Ezra, Nehemiah, Esther* (Peabody, Mass.: Hendriksen Publishers, 1989), 303. [5]ಈ ಮಾಹಿತಿಯು ಅಕ್ಟೊಬರ್ 9, 2003ರಲ್ಲಿ CBS ಯ ದೂರದರ್ಶನ ಕಾರ್ಯಕ್ರಮದಲ್ಲಿ ಸೂಚಿತವಾಗಿದ್ದಾಗಿದೆ. [6]F. W. Krummacher, *Elisha, a Prophet for Our Times* (Grand Rapids, Mich.: Kregel Publications, 1993), 32. ರವರು, “ಕತ್ತೆಯ” ಬದಲು “ಒಂಟೆ” ಎಂದಿದ್ದಾರೆ, ಆದರೆ ಕೆಲ ಲೇಖಕರು ಇಸ್ರಾಯೇಲ್ಯರು ಒಂಟೆಯನ್ನು ಉಪಯೋಗಿಸಿದುದರ ಬಗ್ಗೆ ಶಂಕೆಯನ್ನು ವ್ಯಕ್ತಪಡಿಸಿದ್ದಾರೆ. [7]ಈ ಮೊದಲೇ ಗಮನಿಸಿದಂತೆ, ಎಲೀಷನು ಎಲೀಯನ ಪ್ರತಿನಿಧಿಯಂತೆ ಬಂದವನು ಎಂಬ ಸಾಧ್ಯತೆಯೂ ಇದೆ. ಆ ಪ್ರಕರಣದಲ್ಲಿ, ಯೆಹೋವನು ಎಲೀಯನಿಗೆ ಎಲೀಷನನ್ನು ಕಳಿಸಲು ನಿರ್ದೇಶಿ ಸರಬಹುದು. [8]Adam Clarke, *The Holy Bible with a Commentary and Critical Notes,* vol. 2, *Joshua–Esther* (New York: Abingdon-Cokesbury Press, n.d.), 488. [9]Donald J. Wisemen, *1 and 2 Kings: An Introduction and Commentary,* Tyndale Old Testament Commentaries (Downers Grove, Ill.: Inter-Varsity Press, 1993), 200. [10]William Congreve (1670 - 1729), *The Mourning Bride* [1697], I.1; quoted in John Bartlett, *Bartlett's Familiar Quotations,* 16th ed., ed. Justin Kaplan (Boston: Little, Brown, and Co., 1992), 291.

[11]ಮೊದಲಿನ ಇಬ್ರಿಯ ವೇದಭಾಗದಲ್ಲಿ ಕೆಲ ಭಿನ್ನತೆಗಳು ಇವೆ. RSV ಯಲ್ಲಿ “ಯೆಹೋವನು ಹೀಗೆಂದನು ನಾನು ಒಣ ಬುಗ್ಗೆಯ ನೆಲವನ್ನು ನಿಂತ ನೀರಿನಿಂದ ತುಂಬಿಸುವೆನು” ಎಂದಿದೆ. ಹೆಚ್ಚಿನ ಭಾಷಾಂತರಗಳು NASB ಗೆ ಹತ್ತಿರವಾಗಿವೆ. [12]ಮೋವಾಬ್ಯರು ಇಸ್ರಾಯೇಲ್ಯರು ಅರಣ್ಯದಲ್ಲಿ ಅಲೆಯುವಾಗಲಿಂದಲೂ ವೈರಿಗಳಾಗಿದ್ದರು (ನೋಡಿರಿ ಅರಣ್ಯಕಾಂಡ 22-25). [13]J. T. Headley, *Sacred Heroes and Martyrs,* rev. and ed. J. W. Kirton (London: Ward, Lock, & Tyler, n.d.), 191. [14]G. Rawlinson, “2 Kings,” *The Pulpit Commentary,* vol. 5, *1 & 2 Kings*, ed. H. D. M. Spence and Joseph S. Exell (Grand Rapids, Mich.: Wm. B. Eerdmans Publishing Co., 1950), 46. [15]Ibid. [16]Harold Stigers, “2 Kings,” *The Wycliff Bible Commentary,* ed. Charles F. Pfeiffer (Nashville: Southwestern Co., 1962), 343-44. [17]Keil and Delitzsch, 307. (Emphasis mine.)